# ಅಧಿಸೂಚನೆ

ಜಿ.ಎಸ್. ಆರ್. 261 (ಇ):- ಜೈವಿಕವೈವಿಧ್ಯ ಅಧಿನಿಯಮ 2002ರ 62ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ರಾಷ್ಟ್ರೀಯ ಜೀವಿವೈವಿಧ್ಯ ಪ್ರಾಧಿಕಾರ (ಅಧ್ಯಕ್ಷರು ಮತ್ತು ಇತರ ಸದಸ್ಯರ ವೇತನ, ಭತ್ಯೆಗಳು ಮತ್ತು ಸೇವಾ ಷರತ್ತುಗಳು) ನಿಯಮಗಳು, 2003 ಇದನ್ನು ರದ್ದುಪಡಿಸಿ, ಅಂತಹ ರದ್ದಿಯಾತಿಗೆ ಮೊದಲು ಮಾಡಲಾದ ಅಥವಾ ಮಾಡದೆ ಬಿಟ್ಟುಬಿಡಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹೊರತುಪಡಿಸಿ, ಕೇಂದ್ರ ಸರ್ಕಾರವು ಈ ಮುಂದಿನ ನಿಯಮಗಳನ್ನು ಈ ಮೂಲಕ ಮಾಡುತ್ತದೆ, ಯಾವುವೆಂದರೆ:

**1. ಚಿಕ್ಕ ಹೆಸರು ಮತ್ತು ಪ್ರಾರಂಭ:**

1. ಈ ನಿಯಮಗಳಲ್ಲಿ ಜೈವಿಕವೈವಿಧ್ಯ ನಿಯಮಗಳು, 2004 ಎಂದು ಕರೆಯತಕ್ಕದ್ದು.
2. ಈ ನಿಯಮಗಳು 15.4.2004ರಿಂದ ಜಾರಿಗೆ ಬರತಕ್ಕದ್ದು.

**2. ಅರ್ಥ ವಿವರಣೆಗಳು:**

ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇರದಿದ್ದರೆ,-

(ಎ) **"ಅಧಿನಿಯಮ"** ಎಂದರೆ ಜೈವಿಕವೈವಿಧ್ಯ ಅಧಿನಿಯಮ, 2002 (2003 ರ 18)

(ಬಿ) **"ಪ್ರಾಧಿಕಾರ"** ಎಂದರೆ 8ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಷ್ಟ್ರೀಯ ಜೀವಿವೈವಿಧ್ಯ ಪ್ರಾಧಿಕಾರ,

(ಸಿ) **"ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿ"** ಎಂದರೆ 41ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಸ್ಥಳೀಯ ಸಂಸ್ಥೆಯು ಸ್ಥಾಪಿಸಿದ ಜೈವಿಕವೈವಿಧ್ಯನಿರ್ವಹಣಾ ಸಮಿತಿ.

(ಡಿ) **"ಅಧ್ಯಕ್ಷ"** ಎಂದರೆ ರಾಷ್ಟ್ರೀಯ ಜೈವಿಕ ವೈವಿಧ್ಯ ಪ್ರಾಧಿಕಾರದ ಅಥವಾ ಸಂದರ್ಭಾನುಸಾರ ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ ಅಧ್ಯಕ್ಷ,

(ಇ) **"ಶುಲ್ಕ"** ಎಂದರೆ ಅನುಸೂಚಿಯಲ್ಲಿ ಗೊತ್ತುಪಡಿಸಿರುವ ಯಾವುದೇ ಶುಲ್ಕ,

(ಎಫ್) **"ನಮೂನೆ"** ಎಂದರೆ ಈ ನಿಯಮಗಳಿಗೆ ಅನುಬಂಧಿಸಿರುವ ನಮೂನೆ,

(ಜಿ) **"ಸದಸ್ಯ"** ಎಂದರೆ ರಾಷ್ಟ್ರೀಯ ಜೈವಿಕ ವೈವಿಧ್ಯ ಪ್ರಾಧಿಕಾರದ ಅಥವಾ ಸಂಧರ್ಭಾನುಸಾರ ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ ಸದಸ್ಯ ಮತ್ತು ಅಧ್ಯಕ್ಷರನ್ನು ಒಳಗೊಳ್ಳುತ್ತಾನೆ.

(ಹೆಚ್) **"ಪ್ರಕರಣ"** ಎಂದರೆ ಅಧಿನಿಯಮ, ಪ್ರಕರಣ :

(ಐ) **" ಕಾರ್ಯದರ್ಶಿ"** ಎಂದರೆ ಪ್ರಾಧಿಕಾರದ ಪೂರ್ಣಾವಧಿ ಕಾರ್ಯದರ್ಶಿ,

ಈ ನಿಯಮಗಳಲ್ಲಿ ಉಪಯೋಗಿಸಿರುವ ಆದರೆ ಅರ್ಥವಿವರಿಸಿರದ ಮತ್ತು ಅಧಿನಿಯಮದಲ್ಲಿ ಅರ್ಥವಿವರಿಸಿರುವ ಪದಗಳ ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**3. ಅಧ್ಯಕ್ಷನ ಆಯ್ಕೆ ಮತ್ತು ನೇಮಕಾತಿ ವಿಧಾನ:**

1. ಪ್ರಾಧಿಕಾರದ ಅಧ್ಯಕ್ಷನನ್ನು ಸರಕಾರ ನೇಮಕ ಮಾಡತಕ್ಕದ್ದು.
2. ಉಪಪ್ರಕರಣ (1)ರ ಮೇರೆಗೆ ಮಾಡುವ ಅಧ್ಯಕ್ಷನ ಪ್ರತಿಯೊಂದು ನೇಮಕಾತಿಯನ್ನು ಪ್ರತಿನಿಯೋಜನೆ ಆಧಾರದ ಮೇಲೆ ಅಥವಾ ಕೇಂದ್ರ ಸರಕಾರದ ಸೇವಾ ವ್ಯಾಪ್ತಿಯ ಹೊರಗಿನಿಂದ ಆಯ್ಕೆಮಾಡುವ ಮೂಲಕ ಮಾಡತಕ್ಕದ್ದು. ಪ್ರತಿನಿಯೋಜನೆ ಮೂಲಕ ನೇಮಕ ಮಾಡಿದಲ್ಲಿ ಅರ್ಜಿದಾರನು ಭಾರತ ಸರಕಾರದ ಅಪರ ಕಾರ್ಯದರ್ಶಿ ದರ್ಜೆಗಿಂತ ಕೆಳಗಿನ ದರ್ಜೆಯವನಾಗಿರತಕ್ಕದ್ದಲ್ಲ.

**4. ಅಧ್ಯಕ್ಷನ ಪದಾವಧಿ:**

1. ಪ್ರಾಧಿಕಾರದ ಅಧ್ಯಕ್ಷನು ಮೂರು ವರ್ಷಗಳ ಅವಧಿಗೆ ಪದವನ್ನು ಹೊಂದಿರತಕ್ಕದ್ದು ಮತ್ತು ಪುನರ್ ನೇಮಕಕ್ಕೆ ಅರ್ಹನಾಗಿರತಕ್ಕದ್ದು.
2. ಪರಂತು, ಯಾರೇ ಅಧ್ಯಕ್ಷ ಅರವತ್ತೈದು ವರ್ಷಗಳ ವಯಸ್ಸನ್ನು ತಲುಪಿದ ನಂತರ ಅಥವಾ ಆಡನ ಸೇವಾವಧಿ ಕೊನೆಗೊಂಡ ನಂತರ ಇವುಗಳಲ್ಲಿ ಯಾವುದು ಮೊದಲೋ ಅದರ ನಂತರ ಪದವನ್ನು ಹೊಂದಿರತಕ್ಕದ್ದಲ್ಲ.
3. ಅಧ್ಯಕ್ಷನು ಕೇಂದ್ರ ಸರ್ಕಾರಕ್ಕೆ ಕನಿಷ್ಠ ಒಂದು ತಿಂಗಳ ಸೂಚನೆಯನ್ನು ಲಿಖಿತದಲ್ಲಿ ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

**5. ಅಧ್ಯಕ್ಷನ ವೇತನ ಮತ್ತು ಭತ್ಯೆಗಳು:**

1. ಅಧ್ಯಕ್ಷನು ತಿಂಗಳಿಗೆ 26,000 ರೂಪಾಯಿಗಳ ನಿಗದಿತ ವೇತನಕ್ಕೆ ಅರ್ಹನಾಗಿರುತ್ತಾನೆ. ನಿವೃತ್ತ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಿದಲ್ಲಿ ಆತನ ವೇತನವನ್ನು ಅಂತಹ ವ್ಯಕ್ತಿಗಳಿಗೆ ಅನ್ವಯವಾಗುವಂತಹ ಕೇಂದ್ರ ಸರ್ಕಾರದ ಆದೇಶಗಳ ಅನುಸಾರವಾಗಿ ನಿಗದಿಪಡಿಸತಕ್ಕದ್ದು.
2. ಅಧ್ಯಕ್ಷನು ಕೇಂದ್ರ ಸರ್ಕಾರ ಕಾಲಕಾಲಕ್ಕೆ ತೀರ್ಮಾನಿಸುವಂತಹ ಭತ್ಯೆಗಳು, ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ, ಮನೆ ಬಾಡಿಗೆ ಮತ್ತು ಇತರ ಸವಲತ್ತುಗಳಿಗೆ ಅರ್ಹನಾಗಿರುತ್ತಾನೆ.

**6. ಅಧಿಕಾರೇತರ ಸದಸ್ಯರ ಪದಾವಧಿ ಮತ್ತು ಭತ್ಯೆಗಳು:**

1. ಪ್ರಾಧಿಕಾರದ ಪ್ರತಿಯೊಬ್ಬ ಅಧಿಕಾರೇತರ ಸದಸ್ಯನು ಅವನ ನೇಮಕಾತಿಯನ್ನು ಅಧಿಕೃತ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಒಂದು ಬಾರಿಗೆ ಮೂರು ವರ್ಷಗಳಿಗೆ ಮೀರದ ಅವಧಿಗೆ ತನ್ನ ಪದವನ್ನು ಹೊಂದಿರತಕ್ಕದ್ದು.
2. ಪ್ರಾಧಿಕಾರದ ಸಭೆಗೆ ಹಾಜರಾಗುವ ಪ್ರತಿಯೊಬ್ಬ ಅಧಿಕಾರೇತರ ಸದಸ್ಯನು, ಅವನು ಅಂತಹ ಆಯೋಗಗಳ ಅಥವಾ ಸಮಿತಿಗಳ ಸಭೆಗಳಿಗೆ ಹಾಜಾಗುವುದಕ್ಕೆ ಕೇಂದ್ರ ಸರ್ಕಾರದ ಆಯೋಗಗಳ ಮತ್ತು ಸಮಿತಿಗಳ ಅದಿಕಾರೇತರ ಸದಸ್ಯನಿಗೆ ಅನ್ವಯವಾಗುವಂತಹ ಉಪವೇಶನ ಭತ್ಯೆ, ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಅಂತಹ ಇತರ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**7. ಅಧಿಕಾರೇತರ ಸದಸ್ಯರ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು:**

1. ಪ್ರಾಧಿಕಾರದ ಅಧಿಕಾರೇತರ ಸದಸ್ಯನು ತನ್ನ ಸಹಿ ಹಾಕಿದ ಲಿಖಿತ ರಾಜೀನಾಮೆ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಆ ನಂತರ ಪ್ರಾಧಿಕಾರದಲ್ಲಿ ಆ ಸದಸ್ಯನ ಸ್ಥಾನ ತೆರವಾಗತಕ್ಕದ್ದು.
2. ಪ್ರಾಧಿಕಾರದಲ್ಲಿ ಅಧಿಕಾರೇತರ ಸದಸ್ಯನ ಸಾಂದರ್ಭಿಕ ಖಾಲಿ ಸ್ಥಾನದಲ್ಲಿ ಹೊಸಬರನ್ನು ನಾಮ ನಿರ್ದೇಶಿಸುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಾಮ ನಿರ್ದೇಶಿಸಲಾದ ವ್ಯಕ್ತಿಯು ಅವನನ್ನು ಯಾರ ಸ್ಥಾನದಲ್ಲಿ ನಾಮ ನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದ ಪದಾವಧಿಗೆ ಮಾತ್ರ ಆ ಸ್ಥಾನವನ್ನು ಹೊಂದಿರತಕ್ಕದ್ದು.

**8. ಪ್ರಾಧಿಕಾರದ ಸದಸ್ಯರನ್ನು ಪದದಿಂದ ತೆಗೆದುಹಾಕುವುದು:**

ಪ್ರಕರಣ 11ರಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಕಾರಣದ ಮೇಲೆ ಪ್ರಾಧಿಕಾರದ ಯಾರೇ ಸದಸ್ಯನನ್ನು ಸರ್ಕಾರವು ನೇಮಕ ಮಾಡಿದ ಭಾರತ ಸರ್ಕಾರದ ಕಾರ್ಯದರ್ಶಿ ದರ್ಜೆಗೆ ಕಡಿಮೆ ಇರದ ಅಧಿಕಾರಿಯಿಂದ ಯುಕ್ತ ಮತ್ತು ಸರಿಯಾದ ತನಿಖೆ ನಡಸದೆ ಮತ್ತು ಅಂತಹ ಸದಸ್ಯನಿಗೆ ಆತನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡದೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

**9. ಪ್ರಾಧಿಕಾರದ ಕಾರ್ಯದರ್ಶಿ:**

1. ಪ್ರಾಧಿಕಾರವು ಅದಕ್ಕೆ ಒಬ್ಬ ಕಾರ್ಯದರ್ಶಿಯವರನ್ನು ನೇಮಕ ಮಾಡಿಕೊಳ್ಳತಕ್ಕದ್ದು.
2. ಕಾರ್ಯದರ್ಶಿಯ ನೇಮಕಾತಿಯ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವಿನಿಯಮದ ಮೂಲಕ ಪ್ರಾಧಿಕಾರವು ನಿರ್ಧರಿಸತಕ್ಕದ್ದು.
3. ಪ್ರಾಧಿಕಾರದ ಸಭೆಗಳನ್ನು ಸಮನ್ವಯಗೊಳಿಸುವುದಕ್ಕೆ ಮತ್ತು ಕರೆಯುವುದಕ್ಕೆ, ಪ್ರಾಧಿಕಾರದ ವ್ಯವಹರಣೆಗಳ, ದಾಖಲೆಗಳ ನಿರ್ವಹಣೆಗೆ ಮತ್ತು ಪ್ರಾಧಿಕಾರವು ಅವರಿಗೆ ವಹಿಸುವಂಥ ಇತರ ವಿಷಯಗಳ ನಿರ್ವಹಣೆಗೆ ಕಾರ್ಯದರ್ಶಿ ಜವಾಬ್ದಾರಿಯಾಗಿರತಕ್ಕದ್ದು.

**10. ಪ್ರಾಧಿಕಾರದ ಸಭೆಗಳು :**

1. ಪ್ರಾಧಿಕಾರವು ಸಾಮಾನ್ಯವಾಗಿ ಮೂರು ತಿಂಗಳ ಅವಧಿಯ ನಂತರ ಒಂದು ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿ ಪ್ರಾಧಿಕಾರದ ಕೇಂದ್ರ ಕಾರ್ಯಸ್ಥಾನದಲ್ಲಿ ಅಥವಾ ಅಧ್ಯಕ್ಷನು ತೀರ್ಮಾನಿಸುವಂತಹ ಇತರ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು.
2. ಪ್ರಾಧಿಕಾರದ ಕನಿಷ್ಠ ಐವರು ಸದಸ್ಯರ ಲಿಖಿತ ಕೋರಿಕೆಯ ಮೇಲೆ ಅಥವಾ ಕೇಂದ್ರ ಸರಕಾರದ ನಿರ್ದೇಶನದ ಮೇರೆಗೆ ಅಧ್ಯಕ್ಷನು ಪ್ರಾಧಿಕಾರದ ವಿಶೇಷ ಸಭೆಯನ್ನು ಕರೆಯತಕ್ಕದ್ದು.
3. ಸಾಮಾನ್ಯ ಸಭೆ ನಡೆಸಲು ಕನಿಷ್ಠ ಹದಿನೈದು ದಿನಗಳ ಸೂಚನೆಯನ್ನು ಮತ್ತು ವಿಶೇಷ ಸಭೆ ನಡೆಸಲು ಕನಿಷ್ಠ ಮೂರು ದಿನಗಳ ಸೂಚನೆಯನ್ನು ಅಂತಹ ಸಭೆ ನಡೆಸುವ ಉದ್ದೇಶ, ಸಮಯ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ ಸದಸ್ಯರಿಗೆ ನೀಡತಕ್ಕದ್ದು.
4. ಪ್ರತಿಯೊಂದು ಸಭೆಯು ಅಧ್ಯಕ್ಷನ ಅಧ್ಯಕ್ಷತೆಯಲ್ಲಿ ನಡೆಯತಕ್ಕದ್ದು ಮತ್ತು ಅವನ ಗೈರು ಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮ ಪೈಕಿ ಚುನಾಯಿಸಿದ ಒಬ್ಬ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

5. ಪ್ರಾಧಿಕಾರವು ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳನ್ನು ಅಗತ್ಯವಿದ್ದರೆ, ಹಾಜರಿರುವ ಸದಸ್ಯರ ಸರಳ ಬಹುಮತದ ಮತ್ತು ಮತದಾನದ ಮೂಲಕ ತೆಗೆದುಕೊಳ್ಳತಕ್ಕದ್ದು ಮತ್ತು ಅಧ್ಯಕ್ಷನು ಅಥವಾ ಅಧ್ಯಕ್ಷನ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ಸದಸ್ಯನು ತನ್ನ ಎರಡನೆಯ ಅಥವಾ ನಿರ್ಣಾಯಕ ಮತವನ್ನು ಚಲಾಯಿಸುವ ಅವಕಾಶ ಇರತಕ್ಕದ್ದು.
6. ಪ್ರತಿಯೊಬ್ಬ ಸದಸ್ಯನು ಒಂದು ಮತ ಚಲಾಯಿಸುವ ಹಕ್ಕನ್ನು ಹೊಂದಿರತಕ್ಕದ್ದು.
7. ಪ್ರಾಧಿಕಾರದ ಪ್ರತಿಯೊಂದು ಸಭೆಯ ಕೋರಂ ಐದು ಆಗಿರತಕ್ಕದ್ದು.
8. ಸದಸ್ಯನು 10 ದಿನಗಳ ನೋಟೀಸನ್ನು ನೀಡದೇ ಯಾವುದೇ ವಿಷಯವನ್ನು ಸಭೆಯ ಪರಿಗಣನೆಗೆ ಅದರ ಮುಂದಿಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ, ಹತ್ತು ದಿನಗಳ ನೋಟೀಸು ನೀಡದೇ ಯಾವುದೇ ವಿಷಯವನ್ನು ಸಭೆಯಲ್ಲಿ ಮಂಡಿಸಲು ಅಧ್ಯಕ್ಷ ತನ್ನ ವಿವೇಚನಾನುಸಾರ ಅನುಮತಿ ನೀಡಿದರೆ ಹಾಗೆ ಮಾಡಬಹುದು.
9. ಸಭೆಯ ಸೂಚನಾ ಪತ್ರವನ್ನು ದೂತನ ಮೂಲಕ ನೀಡತಕ್ಕದ್ದು ಅಥವಾ ನೋಂದಾಯಿತ ಅಂಚೆಯ ಮೂಲಕ ಸದಸ್ಯರ ಇತ್ತೀಚಿನ ನಿವಾಸಕ್ಕೆ ಅಥವಾ ವ್ಯವಹಾರದ ವಿಳಾಸಕ್ಕೆ ಅಥವಾ ಪ್ರಕರಣದ ಸಂದರ್ಭದಲ್ಲಿ ಪ್ರಾಧಿಕಾರಸದಸ್ಯ ಕಾರ್ಯದರ್ಶಿಯು ಸೂಕ್ತವೆಂದು ಭಾವಿಸಬಹುದಾದ, ಇತರ ರೀತಿಯಲ್ಲಿ ಕಳುಹಿಸತಕ್ಕದ್ದು.

## 11. ಪ್ರಾಧಿಕಾರದಿಂದ ತಜ್ಞಸಮಿತಿಯ ನೇಮಕ ಮತ್ತು ಅವರ ಹಕ್ಕುಗಳು:

1. ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಉದ್ದೇಶಗಳಿಗಾಗಿ ಪೂರ್ಣವಾಗಿ ಸದಸ್ಯರನ್ನು ಅಥವಾ ಪೂರ್ಣವಾಗಿ ಇತರೆ ವ್ಯಕ್ತಿಗಳನ್ನು ಅಥವಾ ಭಾಗಶ: ಸದಸ್ಯರನ್ನು ಅಥವಾ ಭಾಗಶ: ಇತರೆ ವ್ಯಕ್ತಿಗಳನ್ನು ಒಳಗೊಂಡ ಎಷ್ಟೇ ಸಂಖ್ಯೆಯ ಸಮಿತಿಗಳನ್ನು ರಚಿಸಬಹುದು.
2. ಪ್ರಾಧಿಕಾರದ ಸದಸ್ಯರಲ್ಲದ ಸಮಿತಿಯ ಸದಸ್ಯರಿಗೆ, ಅವರು ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ಶುಲ್ಕಗಳನ್ನು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

## 12. ಪ್ರಾಧಿಕಾರದ ಸಾಮಾನ್ಯ ಪ್ರಕಾರ್ಯಗಳು:

ಪ್ರಾಧಿಕಾರವು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು: ಎಂದರೆ:

i) 3,4 ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ ತಿಳಿಸಲಾಗಿರುವ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳನ್ನು ರೂಪಿಸುವುದು.

ii) ಜೈವಿಕವೈವಿಧ್ಯ ಸಂರಕ್ಷಣೆ, ಅದರ ಘಟಕಾಂಶಗಳ ಸುಸ್ಥಿರ ಬಳಕೆ ಮತ್ತು ಜೈವಿಕಸಂಪನ್ಮೂಲ ಮತ್ತು ಜ್ಞಾನ ಶಕ್ತಿಯ ಬಳಕೆಯಿಂದ ದೊರೆಯುವ ಲಾಭಗಳನ್ನು ನ್ಯಾಯೋಚಿತವಾದ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರಕಾರಕ್ಕೆ ಸಲಹೆ ಮಾಡುವುದು.

iii) ರಾಜ್ಯ ಜೀವಿ ವೈವಿಧ್ಯ ಮಂಡಳಿಯ ಕಾರ್ಯಚಟುವಟಿಕೆಗಳನ್ನು ಸಮನ್ವಯಗಿ ೊಳಿಸುವುದು;

iv) ರಾಜ್ಯ ಜೈವಿಕ ವೈವಿಧ್ಯ ಮಂಡಳಿಗಳಿಗೆ ತಾಂತ್ರಿಕ ನೆರವು ಮತ್ತು ಮಾರ್ಗ ದರ್ಶನ ನೀಡುವುದು;

v) ಅಧ್ಯಯನಗಳನ್ನು ಆಯೋಜಿಸುವುದು ಮತ್ತು ಪರಿಶೋಧನೆ ಮತ್ತು ಸಂಶೋಧನೆಗಳನ್ನು ಪ್ರಾಯೋಜಿಸುವುದು.

vi) ತನ್ನ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದಲ್ಲಿ ಪ್ರಾಧಿಕಾರಕ್ಕೆ ತಾಂತ್ರಿಕ ನೆರವನ್ನು ನೀಡುವುದಕ್ಕಾಗಿ ಮೂರು ವರ್ಷಗಳನ್ನು ಮೀರದ ಒಂದು ನಿರ್ದಿಷ್ಟ ಅವಧಿಗೆ ಸಲಹೆಗಾರರನ್ನು ನೇಮಕಮಾಡಿಕೊಳ್ಳುವುದು;

ಆದರೆ ಮೂರು ವರ್ಷಗಳ ಅವಧಿಯ ನಂತರವೂ ಯಾರೇ ಸಲಹೆಗಾರರನ್ನು ನೇಮಕ ಮಾಡಿಕೊಳ್ಳುವುದು ಅವಶ್ಯಕ ಮತ್ತು ಯುಕ್ತವೆನಿಸಿದರೆ, ಪ್ರಾಧಿಕಾರವು ಅಂಥ ನೇಮಕಾತಿಗಾಗಿ ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

vii) ಜೈವಿಕವೈವಿದ್ಯ ಸಂರಕ್ಷಣೆಗೆ, ಅದರ ಘಟಕಾಂಶಗಳ ಸುಸ್ಥಿರ ಬಳಕೆಗೆ ಮತ್ತು ಜೈವಿಕ ಸಂಪನ್ಮೂಲ ಹಾಗೂ ಜ್ಞಾನಶಕ್ತಿಯ ಬಳಕೆಯಿಂದ ದೊರೆಯುವ ಲಾಭಗಳನ್ನು ನ್ಯಾಯೋಚಿತವಾಗಿ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಹಂಚಿಕೊಳ್ಳುವುದಕ್ಕೆ ಸಂಬಂಧಿಸಿದ ತಾಂತ್ರಿಕ ಮತ್ತು ಅಂಕಿ ಅಂಶ ದತ್ತಾಂಶವನ್ನು, ಕೈಪಿಡಿಗಳನ್ನು, ಸಂಹಿತೆಗಳನ್ನು ಅಥವಾ ಮಾರ್ಗದರ್ಶಿಕೆಗಳನ್ನು ಸಂಗ್ರಹಿಸುವುದು, ಸಂಕಲ್ಪಿಸುವುದು ಮತ್ತು ಪ್ರಕಟಿಸುವುದು;

viii) ಜೈವಿಕವೈವಿದ್ಯ ಸಂರಕ್ಷಣೆಗೆ, ಅದರ ಘಟಕಾಂಶಗಳ ಸ್ಥಿರವಾದ ಬಳಕೆಗೆ ಮತ್ತು ಜೈವಿಕ ಸಂಪನ್ಮೂಲ ಹಾಗೂ ಜ್ಞಾನಶಕ್ತಿಯ ಬಳಕೆಯಿಂದ ದೊರೆಯುವ ಲಾಭಗಳನ್ನು ನ್ಯಾಯೋಚಿತವಾಗಿ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಹಂಚಿಕೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ ಒಂದು ವ್ಯಾಪಕ ಕಾರ್ಯಕ್ರಮವನ್ನು ಸಮೂಹ ಮಾಧ್ಯಮದ ಮೂಲಕ ಸಂಘಟಿಸುವುದು;

ix) ಜೈವಿಕವೈವಿದ್ಯ ಸಂರಕ್ಷಣೆಗಾಗಿ ಮತ್ತು ಅದರ ಘಟಕಾಂಶಗಳ ಸ್ಥಿರ ಬಳಕೆಗಾಗಿಯ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಥವಾ ತೊಡಗಿಸಿಕೊಳ್ಳುವ ಸಂಭವವಿರುವ ಸಿಬ್ಬಂದಿಗೆ ತರಬೇತಿಯನ್ನು ಯೋಜಿಸುವುದು ಮತ್ತು ಸಂಘಟಿಸುವುದು;

x) ತನ್ನ ಸ್ವಂತ ಸ್ವೀಕೃತಿಗಳನ್ನು ಹಾಗೂ ಕೇಂದ್ರ ಸರ್ಕಾರದಿಂದ ಆದ ನಿಧಿಗಳ ವರ್ಗಾವಣೆಯನ್ನು ಸೇರಿಸಿ ಪ್ರಾಧಿಕಾರದ ವಾರ್ಷಿಕ ಬಜೆಟನ್ನು ಸಿದ್ಧಪಡಿಸತಕ್ಕದ್ದು. ಆದರೆ ಕೇಂದ್ರ ಸರ್ಕಾರವು ಮಾಡಿದ ಹಣಕಾಸು ಹಂಚಿಕೆಯನ್ನು ಕೇಂದ್ರ ಸರ್ಕಾರವು ಅನುಮೋದಿಸಿದ ಬಜೆಟ್ ಉಪಬಂಧಗಳೀಗೆ ಅನುಸಾರವಾಗಿ ನಿರ್ವಹಿಸತಕ್ಕದ್ದು.

xi) ಪ್ರಾಧಿಕಾರದ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ಹುದ್ದೆಗಳನ್ನು ಸೃಷ್ಟಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದು ಮತ್ತು ಅಂಥ ಹುದ್ದೆಗಳನ್ನು ಸೃಷ್ಟಿಸುವುದು. ಆದರೆ ಖಾಯಂ/ತಾತ್ಕಾಲಿಕ ಅಥವಾ ಯಾವುದೇ ಸ್ವರೂಪದ ಯಾವುದೇ ಅಂಥ ಹುದ್ದೆಗಳನ್ನು ಕೇಂದ್ರ ಸರ್ಕಾರದ ಪೂವಾನುಮೋದನೆಯನ್ನು ಪಡೆಯದೆ ಸೃಷ್ಟಿಸತಕ್ಕದ್ದಲ್ಲ.

xii) ಪ್ರಾಧಿಕಾರ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ವಿಧಾನದ ಅನುಮೋದನೆ;

xiii) ಜೈವಿಕ ಸಂಪನ್ಮೂಲಗಳ ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನದ ಪರಿಣಾಮಕಾರಿ ನಿರ್ವಹಣೆ, ಪ್ರವರ್ಧನೆ ಮತ್ತು ಸ್ಥಿರ ಬಳಕೆಯಾಗುವಂತೆ ಮಾಡಲು ಜೈವಿಕವೈವಿಧ್ಯ ರಿಜಿಸ್ಟರ್‌ಗಳು ಮತ್ತು ವಿದ್ಯುನ್ಮಾನ ದತ್ತಾಂಶ ಆಧಾರಗಳ ಮೂಲಕ ಜೈವಿಕ ಸಂಪನ್ಮೂಲಗಳಿಗೆ ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನಕ್ಕೆ ದತ್ತಾಂಶದ ಆಧಾರವನ್ನು ನಿರ್ಮಿಸಲು ಮತ್ತು ಮಾಹಿತಿ ಮತ್ತು ದಸ್ತಾವೇಜೀಕರಣ ವ್ಯವಸ್ಥೆಯನ್ನು ಸೃಜಿಸಲು ಕ್ರಮತೆಗೆದುಕೊಳ್ಳುವುದು;

xiv) ಅಧಿನಿಯಮವನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಲು ಲಿಖಿತದಲ್ಲಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿಗೆ ಮತ್ತು ಜೈವಿ ವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ನಿರ್ದೇಶನಗಳನ್ನು ನೀಡುವುದು;

xv) ಪ್ರಾಧಿಕಾರದ ಕಾರ್ಯನಿರ್ವಹಣೆಯ ಬಗ್ಗೆ ಮತ್ತು ಅಧಿನಿಯಮದ ಅನುಷ್ಠನದ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು;

xvi) 6ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಲಾಭ ಹಂಚಿಕೆ ಶುಲ್ಕದ ಬಗ್ಗೆ ಅಥವಾ ಜೈವಿಕ ಸಂಪನ್ಮೂಲದ ಸಂಬಂಧದಲ್ಲಿ ಕಾಲಕಾಲಕ್ಕೆ 19ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಸ್ವಾಮ್ಯ ಶುಲ್ಕದ ಬದಲಾವಣೆಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು, ಅವುಗಳನ್ನು ಮಾರ್ಪಾಟುಗೊಳಿಸುವುದು; ಸಂಗ್ರಹಿಸುವುದು;

xvii) ನಿರ್ದಿಷ್ಟ ಉದ್ದೇಶಗಳಿಗಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿಗೆ ಮತ್ತು ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗೆ ಸಹಾಯಾನುಧಾನ ಮತ್ತು ಅನುದಾನಗಳನ್ನು ಮಂಜೂರು ಮಾಡುಉದು;

xviii) ಅಧಿನಿಯಮವನ್ನು ಅನುಷ್ಟಾನಗೊಳಿಸುವ ಸಂಬಂಧದಲ್ಲಿ ಪ್ರದೇಶದ ವಾಸ್ತವಿಕ ತಪಾಸಣೆ ಕೈಗೊಳ್ಳುವುದು;

xix) ಕಾನೂರು ಬಾಹಿರ ರೀತಿಯಲ್ಲಿ, ಭಾರತದಿಂದ ಪಡೆದ ಯಾವುದೇ ಜೈವಿಕ ಸಂಪನ್ಮೂಲ ಮತ್ತು ಅದರ ಬಗೆಗಿನ ಜ್ಞಾನದ ಮೇಲೆ ಭಾರತದ ಹೊರಗಿನ ಯಾವುದೇ ದೇಶದಲ್ಲಿ ಬೌದ್ಧಿಕ ಆಸ್ತಿ ಹಕ್ಕನ್ನು ಮಂಜೂರು ಮಾಡುವುದನ್ನು ವಿರೋಧಿಸಲು ಕಾನೂನು ತಜ್ಞರನ್ನು ನೇಮಕ ಮಾಡುವುದು ಸೇರಿದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು;

xx) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಮತ್ತು ನಿರ್ದೇಶಿಸಬಹುದಾದಂಥ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು;

**13.** **ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು:**

**1.** ಪ್ರಾಧಿಕಾರದ ದೈನಂದಿನ ಚಟುವಟಿಕೆಗಳ ಸಮಗ್ರ ನಿಯಂತ್ರಣವು ಅಧ್ಯಕ್ಷನದಾಗಿ ರತಕ್ಕದ್ದು;

**2.** 10ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧ್ಯಕ್ಷನು ಪ್ರಾಧಿಕಾರದ ಅಧಿಕಾರಿಗಳ ಮತ್ತು ಸಿಬ್ಬಂಧಿಯ ಮೇಲೆ ಸಾಮಾನಜ್ಯ ಅಧೀಕ್ಷಣಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವನು ಪ್ರಾಧಿಕಾರದ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಅಗತ್ಯವಿರುವ ನಿರ್ದೇಶನಗಳನ್ನು ನೀಡುಬಹುದು.

3. ಅಧ್ಯಕ್ಷನು ಪ್ರಾಧಿಕಾರದ ಎಲ್ಲಾ ರಹಸ್ಯ ಕಾಗದ ಪತ್ರಗಳ ಮತ್ತು ದಾಖಲೆಗಳ ಪ್ರಭಾರ ಹೊಂದಿತಕ್ಕದ್ದು ಮತ್ತು ಅವುಗಳ ಸುರಕ್ಷಿತ ಅಭಿರಕ್ಷೆಗೆ ಜವಾಬ್ದಾರನಾಗಿರತಕ್ಕದ್ದು.
4. ಪ್ರಾಧಿಕಾರವು ಹೊರಡಿಸುವ ಎಲ್ಲಾ ಆದೇಶಗಳಿಗೆ ಮತ್ತು ಸೂಚನೆಗಳಿಗೆ ಅಧ್ಯಕ್ಷನು ಅಥವಾ ಅಧ್ಯಕ್ಷನಿಂದ ಈ ಬಗ್ಗೆ ಅಧಿಕಾರ ಪಡೆದಿರುವ ಯಾರೇ ಇತರ ಅಧಿಕಾರಿಯು ಸಹಿ ಹಾಕಿರತಕ್ಕದ್ದು.
5. ಅಧ್ಯಕ್ಷನು, ಸ್ವತ: ತಾನೇ ಆಗಲಿ ಅಥವಾ ಈ ಉದ್ದೇಶಕ್ಕಾಗಿ ಅಧಿಕಾರ ನೀಡಿರುವ ಪ್ರಾಧಿಕಾರದ ಒಬ್ಬ ಅಧಿಕಾರಿಯ ಮೂಲಕ, ಅನುಮೋದಿತ ಆಯವ್ಯಯದಿಂದ ಎಲ್ಲಾ ಸಂದಾಯಗಳನ್ನು ಮಂಜೂರು ಮಾಡಬಹುದು ಮತ್ತು ಬಟವಾಡೆ ಮಾಡಬಹುದು.
6. ಅಧ್ಯಕ್ಷನು, ಎಲ್ಲಾ ಅಂದಾಜುಗಳಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡುವ ಸಂಪೂರ್ಣ ಅಧಿಕಾರವನ್ನು ಹೊಂದಿರತಕ್ಕದ್ದು.
7. ಅಧ್ಯಕ್ಷನು, ಪ್ರಾಧಿಕಾರದ ಎಲ್ಲಾ ಸಭೆಗಳನ್ನು ಕರೆಯತಕ್ಕದ್ದು ಹಾಗೂ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪ್ರಾಧಿಕಾರವು ತೆಗೆದುಕೊಂಡ ಎಲ್ಲಾ ನಿರ್ಣಯಗಳು ಸರಿಯಾದ ರೀತಿಯಲ್ಲಿ ಕಾರ್ಯಗತಗೊಳ್ಳುವಂತೆ ನೋಡಿಕೊಳ್ಳತಕ್ಕದ್ದು.
8. ಅಧ್ಯಕ್ಷನು, ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ತನಗೆ ವಹಿಸಿಕೊಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**14. ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ವಿಧಾನ:**

1. ಸಂಶೋಧನೆಗಾಗಿ ಅಥವಾ ವಾಣಿಜ್ಯ ಬಳಕೆಗಾಗಿ ಜೈವಿಕ ಸಂಪನ್ಮೂಲಗಳು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಹೊಂದಲು ಪ್ರಾಧಿಕಾರದ ಅನುಮೋದನೆ ಪಡೆಯಬಯಸುವ ಯಾರೇ ವ್ಯಕ್ತಿಯು ನಮೂನೆ-Iರಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. (1) ನೇ ಉಪನಿಯಮದ ಅಡಿಯಲ್ಲಿ ಸಲ್ಲಿಸಲಾದ ಪ್ರತಿಯೊಂದು ಅರ್ಜಿಯ ಜೊತೆ, ಪ್ರಾಧಿಕಾರದ ಹೆಸರಿಗೆ ನೀಡಿದ ಚೆಕ್ಕು ಅಥವಾ ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ಹತ್ತು ಸಾವಿರ ರೂಪಾಯಿಗಳ ಶುಲ್ಕವನ್ನು ಇರಿಸತಕ್ಕದ್ದು.
3. ಪ್ರಾಧಿಕಾರವು ಸ್ಥಳೀಯ ಸಂಸ್ಥೆಗಳೊಂದಿಗೆ ಸಮಾಲೋಚಿಸಿದ ಮತ್ತು ಅದು ಅಗತ್ಯವೆಂದು ಭಾವಿಸಬಹುದಾದಂಥ ಹೆಚ್ಚಿನ ಮಾಹಿತಿಯನ್ನು ಅರ್ಜಿದಾರನಿಂದ ಹಾಗೂ ಇತರ ಮೂಲಗಳಿಂದ ಸಂಗ್ರಹಿಸಿದ ತರುವಾಯ, ಅರ್ಜಿಯನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಸಾಧ್ಯವಾದಷ್ಟು ಬೇಗನೆ ವಿಲೆ ಮಾಡತಕ್ಕದ್ದು.
4. ಅರ್ಜಿಯ ಅರ್ಹತೆ ಬಗ್ಗೆ ಮನವರಿಕೆ ಮಾಡಿಕೊಂಡ ಮೇಲೆ ಪ್ರಾಧಿಕಾರವು, ಅಂಥ ಅವಧಿಗೆ ಮತ್ತು ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಜ್ಞಾನವನ್ನು ಹೊಂದಲು ಅನುಮೋದನೆಯನ್ನು ನೀಡಬಹುದು.

**5.** ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಜ್ಞಾನವನ್ನು ಹೊಂದಲು ನೀಡುವ ಅನುಮೋದನೆಯು, ಪ್ರಾಧಿಕಾರದ ಅಧಿಕೃತ ಅಧಿಕಾರಿಯು ಮತ್ತು ಅರ್ಜಿದಾರನು ಯುಕ್ತವಾಗಿ ಸಹಿ ಮಾಡಿರುವ ಲಿಖಿತ ಒಪ್ಪಂದದ ರೂಪದಲ್ಲಿರತಕ್ಕದ್ದು.

**6.** (5)ನೇ ಉಪನಿಯಮದಲ್ಲಿ ತಿಳಿಸಲಾದ ಒಪ್ಪಂದದ ನಮೂನೆಯನ್ನು ಪ್ರಾಧಿಕಾರವು ಗೊತ್ತುಪಡಿಸತಕ್ಕದ್ದು ಮತ್ತು ಅದು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು; ಎಂದರೆ:-

i) ಅನುಮೋದನೆ ಕೋರಿರುವ ಅರ್ಜಿಯ ಸಾಮಾನ್ಯ ಧ್ಯೇಯಗಳು ಮತ್ತು ಉದ್ದೇಶ;

ii) ಲಗತ್ತಿಸಿರುವ ಮಾಹಿತಿ ಸೇರಿದಂತೆ ಜೈವಿಕ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಜ್ಞಾನದ ವಿವರಣೆ;

iii) ಜೈವಿಕ ಸಂಪನ್ಮೂಲಗಳ ಉದ್ದೇಶಿತ ಬಳಕೆಗಳು (ಸಂಶೋಧನೆ, ತಳಿ ಸಂವರ್ಧನೆ, ವಾಣಿಜ್ಯ ಬಳಕೆ ಇತ್ಯಾದಿ)

iv) ಅರ್ಜಿದಾರನು ಯಾವ ಷರತ್ತುಗಳ ಅಡಿಯಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಕೋರಬಯಸುವನೋ ಆ ಷರತ್ತುಗಳು;

v) ಆರ್ಥಿಕ ಮತ್ತು ಇತರ ಪ್ರಾಸಂಗಿಕ ಲಾಭಗಳ ಪರಿಮಾಣ ಅಗತ್ಯತೆಯಿದ್ದರೆ, ಸಂಶೋಧನೆಯ ಉದ್ದೇಶಗಳಿಗಾಗಿ ನಿರ್ದಿಷ್ಟವಾಗಿ ಜೈವಿಕ ವಸ್ತುವನ್ನು ತೆಗೆದುಕೊಂಡಿದ್ದು ನಂತರ ಅದನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಲು ಹಾಗೂ ತರುವಾಯ ಅದರ ಬಳಕೆಯಲ್ಲಿ ಇತರ ಯಾವುದೇ ಬದಲಾವಣೆಯನ್ನು ಮಾಡಬೇಕಿದ್ದ ಪಕ್ಷದಲ್ಲಿ ಹೊಸ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೆ ಬದ್ಧತೆ;

vi) ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಪ್ರಾಧಿಕಾರದ ಪೂರ್ವಾ ಅನುಮತಿಯಿಲ್ಲದೆ, ಯಾರೇ ಮೂರನೇ ವ್ಯಕ್ತಿಗೆ ವರ್ಗಾಯಿಸಲು ನಿರ್ಬಂಧ;

vii) ಅರ್ಜಿದಾರನು ಯಾವ ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶವನ್ನು ಕೋರಿರುವನೋ ಆ ಜೈವಿಕ ಸಂಪನ್ಮೂಲಗಳ ಪ್ರಮಾಣದ ಮತ್ತು ಅದರ ಗುಣಮಟ್ಟದ ತಪಸೀಲಿನ ಮೇಲೆ ಪ್ರಾಧಿಕಾರವು ವಿಧಿಸುವ ಪರಿಮಿತಿಯನ್ನು ಪಾಲಿಸುವುದು;

viii) ಪ್ರವೇಶಾವಕಾಶ ನೀಡುವಂತೆ ಕೋರಲಾದ ಜೈವಿಕ ವಸ್ತುವಿನ ಪರಾಮರ್ಶೆ ಮಾದರಿಯನ್ನು 39ನೇ ಪ್ರಕರಣದಲ್ಲಿ ಪರಿಗಣಿಸಲಾದ ಕೋಠಿಗಳಲ್ಲಿ ಇಡುವ ಖಾತರಿ;

ix) ಸಂಶೋಧನೆ ಮತ್ತು ಇತರ ಬೆಳವಣಿಗೆಗಳ ನಿಯತ ಸ್ಥಿತಿ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು;

x) ಅಧಿನಿಯಮದ ಮತ್ತು ನಿಯಮಗಳ ಹಾಗೂ ರಾಷ್ಟ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಸಂಬಂಧಪಟ್ಟ ಕಾನೂನುಗಳ ಉಪಬಂಧಗಳಿಗೆ ಬದ್ಧವಾಗಿರಲು ಒಪ್ಪಿಗೆ ನೀಡುವುದು;

xi) ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸ್ಥಿರ ಬಳಕೆಗೆ ಕ್ರಮಗಳನ್ನು ಅನುಕಾಲವಾಗಿಸುವ ಬದ್ಧತೆ;

xii) ಸಂಗ್ರಹಣಾ ಚಟುವಟಿಕೆಗಳಿಂದ ಪರಿಸರದ ಮೇಲಾಗುವ ಹಾನಿಯನ್ನು ಕಡಿಮೆಗ ೊಳಿಸಲು ಬದ್ಧವಾಗಿರುವುದು;

xiii) ಒಪ್ಪಂದದ ಅವಧಿ, ಒಪ್ಪಂದವನ್ನು ಕೊನೆಗಾಣಿಸುವುದಕ್ಕೆ ನೋಟೀಸು, ಬೇರೆ ಬೇರೆ ಖಮುಡಗಳನ್ನು ಸ್ವತಂತ್ರವಾಗಿ ಜಾರಿಗೊಳಿಸುವುದ, ಲಾಭಗಳನ್ನು ಹಂಚಿಕೊಳ್ಳುವಲ್ಲಿ ಹೊಣೆಗಾರಿಕೆಯ ಮಟ್ಟಿಗೆ ಉಪಬಂಧ, ಒಪ್ಪಂದ ಕೊನೆಗೊಳಿಸುವುದನ್ನು ತಡೆಯುವ ಖಂಡಗಳು, ಹೊಣೆಗಾರಿಕೆಯನ್ನು (ನೈಸರ್ಗಿಕ ವಿಪತ್ತುಗಳು), ಪರಿಮಿತಗ ೊಳಿಸುವ ಘಟನೆಗಳು, ಮಧ್ಯಸ್ಥಿಕೆ, ಯಾವುದೇ ರಹಸ್ಯ ಖಂಡ ಮೊದಲಾದಂತಹ ಕಾನೂನಿನ ಉಪಬಂಧಗಳು.

**7.** ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಷರತ್ತುಗಳು ಯಾವ ಜೈವಿಕ ಸಂಪನ್ಮೂಲಗಳನ್ನು ಹೊಂದುವುದಕ್ಕೆ ಅವಕಾಶ ನೀಡಲಾಗುತ್ತಿದೆಯೋ ಆ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ರಕ್ಷಣೆ ಕ್ರಮಗಳಿಗೆ ನಿರ್ದಿಷ್ಟವಾಗಿ ಉಪಬಂಧ ಕಲ್ಪಿಸಬಹುದು.

**8.** ಪ್ರಾಧಿಕಾರವು, ಕೋರಿಕೆಯನ್ನು ಪುರಸ್ಕರಿಸುವುದು ಸಾಧ್ಯವಿಲ್ಲವೆಂದು ಪರಿಗಣಿಸಿದರೆ ಅರ್ಜಿಯನ್ನು ತಿರಸ್ಕರಿಸಿ ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಬಹುದು;

**9.** ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶಗಳನ್ನು ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

**10.** ಪ್ರಾಧಿಕಾರವು, ನೀಡಲಾದ ಅನುಮೋದನೆಗಳಿಗೆ, ಮುದ್ರಿತ ಅಥವಾ ವಿದ್ಯುನ್ಮಾನ ಮಾಧ್ಯಮದ ಮೂಲಕ ವ್ಯಾಪಕ ಪ್ರಚಾರ ನೀಡಲು ಕ್ರಮಗಳನ್ನು ಕೈಗೊಳ್ಳಗಕ್ಕದ್ದು ಮತ್ತು ಯಾವ ಷರತ್ತುಗಳ ಮೇಲೆ ಅನುಮೋದನೆಯನ್ನು ನೀಡಲಾಗಿದೆಯೋ ಆ ಷರತ್ತುಗಳ ಪಾಲನೆಯನ್ನು ನಿಯಮಿತವಾಗಿ ಪರಿವೀಕ್ಷಿಸತಕ್ಕದ್ದು.

**15. ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಅಥವಾ ಅನುಮೋದನೆಯ ರದ್ದಿಯಾತಿ:**

(1) ಪ್ರಾಧಿಕಾರವು, 15ನೇ ನಿಯಮದ ಅಡಿಯಲ್ಲಿ ಪ್ರವೇಶಕ್ಕೆ ನೀಡಲಾದ ಅನುಮೋದನೆಯನ್ನು ಯವುದೇ ದೂರಿನ ಆಧಾರದ ಮೇಲಾಗಲಿ ಅಥವಾ ಸ್ವಪ್ರೇರಣೆಯಿಂದಾಗಲೀ ಹಿಂತೆಗೆದುಕೊಳ್ಳಬಹುದು ಮತ್ತು ಈ ಕೆಳಕಂಡ ಷರತ್ತುಗಳ ಮೇರೆಗೆ ಲಿಖಿತ ಕರಾರನ್ನು ರದ್ದುಗೊಳಿಸಬಹುದು; ಎಂದರೆ;

i. ಯಾರಿಗೆ ಅನುಮೋದನೆ ನೀಡಲಾಗಿದೆಯೋ ಆ ವ್ಯಕ್ತಿಯು, ಅಧಿನಿಯಮದ ಉಪಬಂಧಗಳನ್ನು ಅಥವಾ ಯಾವ ಷರತ್ತಿನ ಮೇಲೆ ಅನುಮೋದನೆಯನ್ನು ನೀಡಲಾಗಿದೆಯೋ ಆ ಷರತ್ತನ್ನು ಉಲ್ಲಂಘಿಸಿದ್ದಾನೆಂಬ ಯುಕ್ತ ನಂಬಿಕೆಯ ಆಧಾರದ ಮೇಲೆ;

ii. ಯಾವ ವ್ಯಕ್ತಿಗೆ ಅನುಮೋದನೆಯನ್ನು ನೀಡಲಾಗಿದೆಯೋ ಆ ವ್ಯಕ್ತಿಯು, ಒಪ್ಪಂದದ ನಿಬಂಧನೆಗಳನ್ನು ಪಾಲಿಸಲು ವಿಫಲನಾದಾಗ;

iii. ನೀಡಿರುವ, ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಪ್ರವೇಶಾವಕಾಶದ ಯಾವುದೇ ಷರತ್ತುಗಳನ್ನು ಪಾಲಿಸಲು ವಿಫಲನಾದಲ್ಲಿ;

iv. ಸಾರ್ವಜನಿಕ ಹಿತಾಸಕ್ತಿ ಅಥವಾ ಪರಿಸರ ಸಂರಕ್ಷಣೆ ಮತ್ತು ಜೈವಿಕ ವೈವಿಧ್ಯತೆಯ ಸಂರಕ್ಷಣೆಯನ್ನು ತಿರಸ್ಕರಿಸಿರುವ ಆಧಾರದ ಮೇಲೆ;

(2) ಪ್ರಾಧಿಕಾರವು, ತಾನು ಹೊರಡಿಸಿದ ರದ್ದಿಯಾತಿಯ ಪ್ರತಿಯೊಂದು ಆದೇಶದ ಪ್ರತಿಯನ್ನು, ಸಂಬಂಧಪಟ್ಟ ರಾಜ್ಯ ಜೈವಿಕ ವೈವಿಧ್ಯ ಮಂಡಳಿಗೆ ಮತ್ತು ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗಳಿಗೆ, ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶವನ್ನು ನಿಷೇಧಿಸಲು ಹಾಗೂ ಯಾವುದೇ ಹಾನಿ ಆಗಿದ್ದರೆ, ಆ ಹಾನಿಯನ್ನು ನಿರ್ಧರಿಸಲು ಹಾಗೂ ಆ ಹಾನಿಯನ್ನು ವಸೂಲಿ ಮಾಡುವುದಕ್ಕೆ ಕ್ರಮ ಕೈಗೊಳ್ಳಲು ಕಳುಹಿಸತಕ್ಕದ್ದು.

**16. ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ನಿರ್ಬಂಧ:**

**(1)** ಪ್ರಾಧಿಕಾರವು, ಅದು ಅಗತ್ಯ ಹಾಗೂ ಯುಕ್ತವೆಂದು ಭಾವಿಸಿದರೆ, ಈ ಕೆಳಕಂಡ ಕಾರಣಗಳಿಗಾಗಿ ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶಕ್ಕಾಗಿ ಪ್ರವೇಶಾವಕಾಶಕ್ಕಾಗಿ ಮಾಡಿಕೊಂಡಿರುವ ಕೋರಿಕೆಯನ್ನು ನಿರ್ಬಂಧಿಸಲು ಅಥವಾ ನಿಷೇಧಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು: ಎಂದರೆ:

i. ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಕೋರಿಕೆಯು ಅಳಿವಿನಂಚಿನಲ್ಲಿರುವ ಯಾವುದೇ ಪ್ರಭೇದಕ್ಕಾಗಿಯಾಗಿದ್ದರೆ:

ii. ಹೊಂದುವ ಅವಕಾಶದ ಕೋರಿಕೆಯು ಯಾವುದೇ ಪ್ರಾದೇಶಿಕ ಹಾಗೂ ವಿರಳ ಪ್ರಭೇದಕ್ಕಾಗಿಯಾಗಿದ್ದರೆ:

iii. ಹೊಂದುವ ಅವಕಾಶದ ಕೋರಿಕೆಯು, ಸ್ಥಳೀಯ ಜನತೆಯ ಜೀವನಾಧಾರದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡಬಹುದಾದ ಸಾಧ್ಯತೆ ಇದ್ದರೆ:

iv. ಹೊಂದುವ ಅವಕಾಶದ ಕೋರಿಕೆಯು, ಪರಿಸರದ ಮೇಲೆ ನಿಯಂತ್ರಿಸಲು ಹಾಗೂ ತಗ್ಗಿಸಲು ಕಷ್ಟವಾಗಬಹುದಾದಂಥ ಪ್ರತಿಕೂಲ ಪರಿಣಾಮವನ್ನುಂಟು ಮಾಡಬಹುದಾದ ಸಾಧ್ಯತೆ ಇದ್ದರೆ:

v. ಹೊಂದುವ ಅವಕಾಶದ ಕೋರಿಕೆಯು, ತಳಿನಾಶಕ್ಕೆ ಕಾರಣವಾಗಬಹುದಾದ ಅಥವಾ ಜೀವಿ ಪರಿಸ್ಥಿತಿಯ ಕ್ರಿಯೆಗೆ ತೊಂದರೆಯುಂಟು ಮಾಡಬಹುದಾದ ಸಾಧ್ಯತೆ ಇದ್ದರೆ:

vi. ರಾಷ್ಟ್ರೀಯ ಹಿತಾಸಕ್ತಿಗೆ ಹಾಗೂ ಭಾರತವು ಮಾಡಿಕೊಂಡ ಇತರ ಸಂಬಂಧಪಟ್ಟ ಅಂತರರಾಷ್ಟ್ರೀಯ ಒಪ್ಪಂದಗಳಿಗೆ ವಿರುದ್ಧವಾದ ಉದ್ದೇಶಗಳಿಗೆ ಸಂಪನ್ಮೂಲಗಳನ್ನು ಬಳಸುವುದು.

**17. ಸಂಶೋಧನಾ ಫಲಿತಾಂಶಗಳನ್ನು ವರ್ಗಾಯಿಸುವುದಕ್ಕಾಗಿ ಅನುಮೋದನೆ ಕೋರುವ ವಿಧಾನ:**

1. ಭಾರತದಿಂದ ಪಡೆದಿರುವ ಜೈವಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ಸಂಶೋಧನಾ ಫಲಿತಾಂಶಗಳನ್ನು, ಹಣಕಾಸಿನ ಪ್ರತಿಫಲಕ್ಕಾಗಿ ವಿದೇಶೀ ಪ್ರಜೆಗಳಿಗೆ, ಕಂಪನಿಗಳಿಗೆ ಮತ್ತು ಅನಿವಾಸಿ ಭಾರತೀಯರಿಗೆ (ಎನ್ ಆರ್ ಐ ಗಳು) ವರ್ಗಾಯಿಸಲು ಇಚ್ಛಿಸುವ ಯಾರೇ ವ್ಯಕ್ತಿಯು ಪ್ರಾಧಿಕಾರಕ್ಕೆ ನಮೂನೆ (II)ರಲ್ಲಿ ಅರ್ಜಿ ಸಲ್ಲಿಸತಕ್ಕದ್ದು.
2. (1)ನೇ ಉಪನಿಯಮದ ಅಡಿಯಲ್ಲಿ ಸಲ್ಲಿಸುವ ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ ಪ್ರಾಧಿಕಾರದ ಹೆಸರಿಗೆ ನೀಡಿದ ಬ್ಯಾಂಕ್ ಡ್ರಾಫ್ಟ್ ಅಥವಾ ಚೆಕ್‌ನ ರೂಪದಲ್ಲಿ ಐದು ಸಾವಿರ ರೂಪಾಯಿಗಳ ಶುಲ್ಕವನ್ನು ಲಗತ್ತಿಸಿರತಕ್ಕದ್ದು.
3. (1)ನೇ ಉಪ ನಿಯಮದ ಅಡಿಯಲ್ಲಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ಸ್ವೀಕರಿಸಿದಂದಿನಿಂದ ಮೂರು ತಿಂಗಳುಗಳ ಅವಧಿಯೊಳಗೆ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಪ್ರಾಧಿಕಾರವು ತೀರ್ಮಾನಿಸತಕ್ಕದು.
4. ಅರ್ಜಿದಾರನು ಎಲ್ಲಾ ಅಗತ್ಯತೆಗಳನ್ನು ಪೂರೈಸಿದ್ದಾನೆ ಎಂದು ಮನವರಿಕೆಯಾದ ಮೇಲೆ, ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ವಿಧಿಸುವುದು ಯೋಗ್ಯವೆಂದು ತಾನು ಭಾವಿಸುವಂಥ ನಿಬಂಧನೆ ಮತ್ತು ಷರತ್ತುಗಳಿಗೊಳೊಪಟ್ಟು, ಸಂಶೋಧನಾ ಫಲಿತಾಂಶಗಳನ್ನು ವರ್ಗಾಯಿಸುವುದಕ್ಕೆ ಅನುಮೋದನೆ ನೀಡಬಹುದು.
5. ವರ್ಗಾವಣೆಗಾಗಿ ನೀಡುವ ಅನುಮೋದನೆಯನ್ನು ಪ್ರಾಧಿಕಾರದ ಅಧಿಕೃತ ಅಧಿಕಾರಿ ಮತ್ತು ಅರ್ಜಿದಾರನು ಕ್ರಮಬದ್ಧವಾಗಿ ಸಹಿ ಮಾಡಿದ ಲಿಖಿತ ಒಪ್ಪಂದದ ರೂಪದಲ್ಲಿ ನೀಡತಕ್ಕದ್ದು. ಆ ಒಪ್ಪಂದದ ನಮೂನೆಯ ಪ್ರಾಧಿಕಾರವು ತೀರ್ಮಾನಿಸಬಹುದಾದಂತೆ ಇರತಕ್ಕದ್ದು.
6. ಒಂದು ಅರ್ಜಿಯನ್ನು ಅಂಗೀಕರಿಸುವುದು ಸಾಧ್ಯವಿಲ್ಲವೆಂದು ಪ್ರಾಧಿಕಾರವು ಪರಿಗ ಣಿಸಿದರೆ, ಅದು ಅರ್ಜಿಯನ್ನು ತಿರಸ್ಕರಿಸಬಹುದು; ಹಾಗೆ ಮಾಡಿದಾಗ ಅದಕ್ಕೆ ಕಾರಣಗ ಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

ಆದರೆ, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳು ಯುಕ್ತ ಅವಕಾಶವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

**18. ಬೌದ್ಧಿಕ ಆಸ್ತಿ ರಕ್ಷಣೆಗೆ ಅರ್ಜಿ ಸಲ್ಲಿಸುವ ಮೊದಲು ಪೂರ್ವಾನುಮತಿ ಪಡೆಯುವ ವಿಧಾನ:**

1. ಭಾರತದಿಂದ ಪಡೆದ ಜೈವಿಕ ವಸ್ತು ಮತ್ತು ಅದರ ಬಗೆಗಿನ ಜ್ಞಾನ ಕುರಿತು ಸಂಶೋಧನೆಯನ್ನು ಆಧರಿಸಿ ಪೇಟೆಂಟ್ ಅಥವಾ ಯಾವುದೇ ಇತರ ಬೌದ್ಧಿಕ ಆಸ್ತಿಗಾಗಿ ಅರ್ಜಿಸಲ್ಲಿಸಲು ಇಚ್ಛಿಸುವ ಯಾರೇ ವ್ಯಕ್ತಿಯು, ನಮೂನೆ - IIIರಲ್ಲಿ ಅರ್ಜಿಸಲ್ಲಿಸತಕ್ಕದ್ದು.
2. (1)ನೇ ಉಪ ನಿಯಮದ ಅಡಿಯಲ್ಲಿ ಸಲ್ಲಿಸುವ ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ, ಐದು ನೂರು ರೂಪಾಯಿಗಳ ಶುಲ್ಕವನ್ನು ಸಂದಾಯಮಾಡತಕ್ಕದ್ದು.
3. ಅರ್ಜಿಯನ್ನು ಕ್ರಮಬದ್ಧವಾಗಿ ಮೌಲ್ಯ ನಿರ್ಣಯ ಮಾಡಿದ ತರುವಾಯ, ಪ್ರಾಧಿಕಾರವು, ಅರ್ಹತೆಯ ಆಧಾರದ ಮೇಲೆ, ಅರ್ಜಿಯ ಬಗ್ಗೆ, ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಸ್ವೀಕರಿಸಿದ ಮೂರು ತಿಂಗಳುಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು.

4. ಅರ್ಜಿದಾರರು ಅವಶ್ಯವಾದ ಎಲ್ಲಾ ಅಗತ್ಯತೆಗಳನ್ನು ಪೂರೈಸಿದ್ದಾನೆ ಎಂದು ಮನವರಿಕೆಯಾದ ಮೇಲೆ, ಪ್ರಾಧಿಕಾರವು , ಪ್ರತಿಯೊಂದು ಸಂದರ್ಭದಲ್ಲಿ ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಪೇಟೆಂಟ್‌ಗಾಗಿ ಅಥವಾ ಯಾವುದೇ ಬೌದ್ಧಿಕ ಆಸ್ತಿ ಹಕ್ಕಿಗಾಗಿ ಅರ್ಜಿ ಸಲ್ಲಿಸುವುದಕ್ಕೆ ಅನುಮೋದನೆ ನೀಡಬಹುದು.

5. ಆ ಅನುಮೋದನೆಯನ್ನು, ಪ್ರಾಧಿಕಾರದ ಅಂಗೀಕೃತ ಅಧಿಕಾರಿ ಮತ್ತು ಅರ್ಜಿದಾರನು ಯಥೋಚಿತವಾಗಿ ಸಹಿ ಮಾಡಿರುವ ಲಿಖಿತ ಒಪ್ಪಂದದ ನಮೂನೆಯಲ್ಲಿ ಕೊಡತಕ್ಕದ್ದು. ಒಪ್ಪಂದದ ನಮೂನೆಯು ಪ್ರಾಧಿಕಾರವು ತೀರ್ಮಾನಿಸಬಹುದಾದಂತೆ ಇರತಕ್ಕದ್ದು.

6. ಪ್ರಾಧಿಕಾರವು, ಕೋರಿಕೆಯನ್ನು ಅಂಗೀಕರಿಸುವುದು ಸಾಧ್ಯವಿಲ್ಲವೆಂದು ತಾನು ಪರಿಗಣಿಸಿದರೆ, ಆ ಅರ್ಜಿಯನ್ನು ತಿರಸ್ಕರಿಸಬಹುದು. ಹಾಗೆ ಮಾಡುವುದಕ್ಕೆ ಮೊದಲು ಕಾರಣಗಳನ್ನು ದಾಖಲಿಸಬೇಕು. ತಿರಸ್ಕರಿಸುವ ಆದೇಶವನ್ನು ಮಾಡುವ ಮೊದಲು ಅರ್ಜಿದಾರನಿಗೆ ಆತನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಡತಕ್ಕದ್ದು.

**19. 20ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಮೂರನೇ ಪಕ್ಷಕಾರನಿಗೆ ವರ್ಗಾಯಿಸುವ ವಿಧಾನ:-**

1. ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಜ್ಞಾನವನ್ನು ಹೊಂದುವುದಕ್ಕೆ ಅನುಮೋದನೆ ಪಡೆದ ವ್ಯಕ್ತಿಗಳು ಪ್ರವೇಶಾವಕಾಶ ಪಡೆದ ಜೈವಿಕ ಸಂಪನ್ಮೂಲ ಅಥವಾ ಜ್ಞಾನವನ್ನು ಯಾರೇ ಇತರ ವ್ಯಕ್ತಿಗೆ ಅಥವಾ ಸಂಸ್ಥೆಗೆ ವರ್ಗಾಯಿಸಲು ಉದ್ದೇಶಿಸಿದರೆ, ಪ್ರಾಧಿಕಾರಕ್ಕೆ ನಮೂನೆ -IVರಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

2. (1)ನೇ ಉಪ ನಿಯಮದ ಅಡಿಯಲ್ಲಿ ಸಲ್ಲಿಸಿದ ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ, ಪ್ರಾಧಿಕಾರದ ಹೆಸರಿಗೆ ನೀಡಿದ ಬ್ಯಾಂಕ್ ಡ್ರಾಫ್ಟ್ ಅಥವಾ ಚೆಕ್ಕಿನ ರೂಪದಲ್ಲಿ ಹತ್ತು ಸಾವಿರ ರೂಪಾಯಿಗಳ ಶುಲ್ಕವನ್ನು ಲಗತ್ತಿಸಿರತಕ್ಕದ್ದು.

3. ಪ್ರಾಧಿಕಾರವು, ಹೆಚ್ಚುವರಿ ಮಾಹಿತಿಯನ್ನು ಪಡೆದುಕೊಂಡ ತರುವಾಯ, ಅರ್ಜಿಯ ಬಗ್ಗೆ, ಸಾಧ್ಯವಾದಷ್ಟು ಮಟ್ಟಿಗೆ ಅದನ್ನು ಪಡೆದ ಆರು ತಿಂಗಳುಗಳ ಅವಧಿಯೊಳಗಾಗಿ ತೀರ್ಮಾನಿಸತಕ್ಕದ್ದು.

4. ಅರ್ಜಿದಾರರು ಅವಶ್ಯವಾದ ಎಲ್ಲಾ ಅಗತ್ಯತೆಗಳನ್ನು ಪೂರೈಸಿದ್ದಾನೆಂದು ಮನವರಿಕೆಯಾದ ಮೇಲೆ, ಪ್ರಾಧಿಕಾರವು , ಪ್ರತಿಯೊಂದು ಸಂದರ್ಭದಲ್ಲಿ ವಿಧಿಸುವುದಕ್ಕೆ ಯೋಗ್ಯವೆಂದು ತಾನು ಭಾವಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಮೂರನೇ ಪಕ್ಷಕಾರನಿಗೆ ವರ್ಗಾಯಿಸುವುದಕ್ಕೆ ಅನುಮೋದನೆಯನ್ನು ನೀಡಬಹುದು.

5. (4)ನೇ ಉಪ ನಿಯಮದ ಅಡಿಯಲ್ಲಿ ನೀಡಬಹುದಾದ ಅನುಮೋದನೆಯು, ಪ್ರಾಧಿಕಾರದ ಅಧಿಕೃತ ಅಧಿಕಾರಿ ಮತ್ತು ಅರ್ಜಿದಾರನು ಯಥೋಚಿತವಾಗಿ ಸಹಿ ಮಾಡಿದ ಲಿಖಿತ ಒಪ್ಪಂದ ರೂಪದಲ್ಲಿರತಕ್ಕದ್ದು. ಆ ಒಪ್ಪಂದದ ನಮೂನೆಯು ಪ್ರಾಧಿಕಾರವು ತೀರ್ಮಾನಿಸಬಹುದಾದಂತೆ ಇತರಕ್ಕದ್ದು.

6. ಪ್ರಾಧಿಕಾರವು, ಆ ಕೋರಿಕೆಯನ್ನು ಅಂಗೀಕರಿಸುವುದು ಸಾಧ್ಯವಿಲ್ಲವೆಂದು ತಾನು ಪರಿಗಣಿಸಿದರೆ ಅರ್ಜಿಯನ್ನು ತಿರಸ್ಕರಿಸಬಹುದು, ಹಾಗೆ ಮಾಡಿದಾಗ ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಬೇಕು. ಆದರೆ, ಅರ್ಜಿದಾರನಿಗೆ ಅಹವಾಲನ್ನು ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಡದೆ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

**20. ಪ್ರಯೋಜನವನ್ನು ನಿಷ್ಪಕ್ಷಪಾತವಾಗಿ ಹಂಚಿಕೊಳ್ಳುವ ಮಾನದಂಡ (21ನೇ ಪ್ರಕರಣ):**

1) ಪ್ರಾಧಿಕಾರವು ರಾಜ್ಯಪತ್ರದಲ್ಲಿ, ಅಧಿಸೂಚನೆಯ ಮೂಲಕ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಲಾಭದ ಹಂಚಿಕೆಯ ಸೂತ್ರವನ್ನು ವಿವರಿಸತಕ್ಕದ್ದು.

2) ಮಾರ್ಗದರ್ಶಿ ಸೂತ್ರಗಳು, ಸ್ವಾಮ್ಯ ಶುಲ್ಕ ಜಂಟಿ ಉದ್ಯಮಗಳು, ತಂತ್ರಜ್ಞಾನ ವರ್ಗಾವಣೆ, ಉತ್ಪನ್ನಾಭಿವೃದ್ಧಿ, ಶಿಕ್ಷಣ ಮತ್ತು ಜಾಗೃತಿ ಮೂಡಿಸುವ ಚಟುವಟಿಕೆಗಳು, ಸಾಂಸ್ಥಿಕ ಸಾಮರ್ಥ್ಯ ನಿರ್ಮಾಣ ಮತ್ತು ಉದ್ಯಮ ಬಂಡವಾಳ ನಿಧಿಯಂಥ ಹಣಕಾಸಿನ ಮತ್ತು ಇತರ ಪ್ರಯೋಜನಗಳಿಗೆ ಉಪಬಂಧ ಕಲ್ಪಿಸತಕ್ಕದ್ದು.

3) ಲಾಭದ ಹಂಚಕೆಯ ಸೂತ್ರವನ್ನು ಆಯಾಯ ಪ್ರಕರಣದ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

4) ಪ್ರಾಧಿಕಾರವು, ಯಾರೇ ವ್ಯಕ್ತಿಗೆ, ಜೈವಿಕ ಸಂಪನ್ಮೂಲಗಳನ್ನು ಹೊಂದುವುದಕ್ಕಾಗಿ ಅಥವಾ ಸಂಶೋಧನಾ ಫಲಿತಾಂಶಗಳ ವರ್ಗಾವಣೇಗಾಗಿ ಅಥವಾ ಪೇಟೆಂಟ್‌ಗೆ ಮತ್ತು ಬೌದ್ಧಿಕ ಆಸ್ತಿ ಹಕ್ಕಿಗೆ ಅರ್ಜಿ ಸಲ್ಲಿಸುವುದಕ್ಕಾಗಿ ಅಥವಾ ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲವನ್ನು ಮತ್ತು ಅದರ ಬಗೆಗಿನ ಜ್ಞಾನವನ್ನು ಮೂರನೇ ಪಕ್ಷಕಾರನಿಗೆ ವಗ ರ್ಾಯಿಸುವುದಕ್ಕಾಗಿ ಅನುಮೋದನೆ ನೀಡುವಾಗ, ಹೊಂದುವ ಅವಕಾಶ ಪಡೆದ ಜೈವಿಕ ವಸ್ತುವಿನ ಮತ್ತು ಅದರ ಬಗೆಗಿನ ಜ್ಞಾನದ ಬಳಕೆಯಿಂದ ಆಗುವ ಲಾಭಗಳ ನಿಷ್ಪಕ್ಷಪಾತ ಹಂಚಿಕೆಯಾಗುವಂತೆ ಮಾಡಲು ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ವಿಧಿಸಬಹುದು.

5) ಲಾಭಗಳ ಪರಿಮಾಣವು, ಸ್ಥಳೀಯ ಸಂಸ್ಥೆಗಳು ಲಾಭಗಳಿಗೆ ಕ್ಲೇಮು ಮಾಡುವವರೊಂದಿಗೆ ಿ ಸಮಾಲೋಚಿಸಿದ ನಂತರ ಅಂಥ ಅನುಮೋದನೆಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗಳ ಮತ್ತು ಪ್ರಾಧಿಕಾರದ ನಡುವೆ ಪರಸ್ಪರ ಒಪ್ಪಿಗೆಯಾಗದದ್ದಾಗಿರತಕ್ಕದ್ದು ಮತ್ತು ಜೈವಿಕ ವೈವಿಧ್ಯದ ಸಂರಕ್ಷಣೆ ಹಾಗೂ ಅದರ ಸುಸ್ಥಿರ ಬಳಕೆಯನ್ನು ಖಚಿತಪಡಿಸುವ ಕ್ರಮಗಳು ಒಳಗೊಂಡಂತೆ, ಅವುಗಳನ್ನು ಹೊಂದುವ ಅವಕಾಶದ ಪರಿಭಾಷಿತ ಮಾನದಂಡಗಳು, ಬಳಕೆಯ ವ್ಯಾಪ್ತಿ ಸುಸ್ಥಿರ ಅಂಶ, ಪರಿಣಾಮ ಮತ್ತು ನಿರೀಕ್ಷಿತ ಫಲಿತಾಂಶ ಮಟ್ಟಗಳ ಬಗ್ಗೆ ಸೂಕ್ತ ಗಮನ ನೀಡಿ ಆ ಪರಿಮಾಣವನ್ನು ನಿರ್ಧರಿಸಬಹುದು.

6) ಪ್ರತಿಯೊಂದು ಪ್ರಕರಣವನ್ನು ಆಧರಿಸಿ, ಪ್ರಾಧಿಕಾರವು, ಅಲ್ಪ, ಮಧ್ಯಮ ತ್ತು ದೀರ್ಘಕಾಲೀನ ಲಾಭಗಳ ಮೇಲೆ ಲಾಭಗಳ ಹಂಚಕೆಯನ್ನು ನಿರ್ಧರಿಸುವುದಕ್ಕಾಗಿ ಕಾಲಮಿತಿಯನ್ನು ಗೊತ್ತುಪಡಿಸತಕ್ಕದ್ದು.

7) ಲಾಭಗಳು ಜೈವಿಕ ವೈವಿಧ್ಯದ ಸಂರಕ್ಷಣೆ ಮತ್ತು ಅದರ ಸುಸ್ಥಿರ ಬಳಕೆಯನ್ನು ಖಾತ್ರಿಪಡಿಸತಕ್ಕದ್ದೆಂದು ಪ್ರಾಧಿಕಾರವು ಗೊತ್ತುಪಡಿಸತಕ್ಕದ್ದು.

8) ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಜ್ಞಾನವನ್ನು ಒಬ್ಬ ನಿರ್ದಿಷ್ಟ ವ್ಯಕ್ತಿಯು ಅಥವಾ ವ್ಯಕ್ತಿಗಳ ಗುಂಪು ಅಥವಾ ಸಂಸ್ಥೆಗಳು ಹೊಂದುವ ಅವಕಾಶ ಪಡೆದಲ್ಲಿ ಒಪ್ಪಿತ ಮೊಗಲಗು ಜಿಲ್ಲಾಡಳಿತದ ಮೂಲಕ ನೇರವಾಗಿ ತಮಗೆ ಸಂದಾಯವಾಗ ುವಂತೆ ಖಚಿತಪಡಿಸಿಕೊಳ್ಳುವುದಕ್ಕೆ ಪ್ರಾದಿಕಾರವು ಕ್ರಮ ಕೈಗೊಳ್ಳಬಹುದು. ಅಂಥ ವ್ಯಕ್ತಿಗಳು ಅಥವಾ ವ್ಯಕ್ತಿಗಳ ಗುಂಪು ಅಥವಾ ಸಂಸ್ಥೆಗಳನ್ನು ಗುರುತಿಸಲು ಸಾದ್ಯವಾಗ

ದಿದ್ದಲ್ಲಿ ಆ ಹಣಕಾಸು ಲಾಭಗಳನ್ನು ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿಯಲ್ಲಿ ಠೇವಣಿ ಇಡತಕ್ಕದ್ದು.

9) ನಿರ್ಧರಿಸಿದ ಲಾಭಗಳ ಶೇಕಡಾ ಐವರಷ್ಟನ್ನು ಆಡಳಿತಾತ್ಮಕ ಮತ್ತು ಸೇವಾ ವೆಚ್ಚಗಳಿಗಾಗಿ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರ ಮಂಡಳಿಗೆ ಮೀಸಲಿರಿಸತಕ್ಕದ್ದು.

10) ಪ್ರಾಧಿಕಾರವು, ಅದು ನಿರ್ಧರಿಸಿದ ರೀತಿಯಲ್ಲಿ (4)ನೇ ಉಪ ನಿಯಮದಡಿ ನಿರ್ಧರಿಸಿದಂಥ ಲಾಭಗಳು ದೊರೆಯುವುದನ್ನೂ ಬರುವುದನ್ನೂ ಮೇಲ್ವಿಚಾರಣೆ ಮಾಡತಕ್ಕದ್ದು.

**21. ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿಯ ನಿರ್ವಹಣೆ:**

**1.** ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿಯನ್ನು ಅಧ್ಯಕ್ಷ ಅಥವಾ ಈ ಬಗ್ಗೆ ಅಧಿಕಾರ ನೀಡಬಹುದಾದ ಪ್ರಾಧಿಕಾರದ ಅಂಥ ಇತರ ಅಧಿಕಾರಿಯು ನಿರ್ವಹಿಸತಕ್ಕದ್ದು.

**2.** ರಾಷ್ಟ್ರೀಯ ಜೈವಿಕ ವೈವಿಧ್ಯ ನಿಧಿಯು ಎರಡು ಪ್ರತ್ಯೇಕ ಲೆಕ್ಕ ಶೀರ್ಷಿಕೆಗಳನ್ನು ಹೊಂದಿರತಕ್ಕದ್ದು. ಒಂದು ಕೇಂದ್ರ ಸರ್ಕಾರದಿಂದ ಸ್ವೀಕರಿಸಿದ ಸ್ವೀಕೃತಿಗಳಿಗೆ ಸಂಬಂಧಿಸಿದ್ದಾಗಿರತಕ್ಕದ್ದು ಮತ್ತು ಇನ್ನೊಂದು ಪ್ರಾಧಿಕಾರದ ಶುಲ್ಕ, ಲೈಸೆನ್ಸ್ ಶುಲ್ಕ, ಸ್ವಾಮ್ಯ ಶುಲ್ಕ ಮತ್ತು ಇತರ ಸ್ವೀಕೃತಿಗಳಿಗೆ ಸಂಬಂಧಿಸಿದಾಗಿರತಕ್ಕದ್ದು.

**22. ಜೈವಿಕವೈವಿಧ್ಯ ನಿರ್ವಹಣಾ ಸಮಿತಿಯ ರಚನೆ:**

**1)** ಪ್ರತಿಯೊಂದು ಸ್ಥಳೀಯ ಸಂಸ್ಥೆಯು, ಅದರ ಕ್ಷೇತ್ರ ವ್ಯಾಪ್ತಿಯ ಪ್ರದೇಶದೊಳಗೆ ಒಂದು ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿ (ಬಿಎಂಸಿ) ಯನ್ನು ರಚಿಸತಕ್ಕದ್ದು.

**2)** (1)ನೇ ಉಪ ನಿಯಮದಡಿ ರಚಿಸಲಾದಂಥ ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯು, ಒಬ್ಬ ಅಧ್ಯಕ್ಷ ಮತ್ತು ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತರಾದ ಆರು ಜನಕ್ಕಿಂತ ಹೆಚ್ಚಿಲ್ಲದಷ್ಟು ಸಂಖ್ಯೆಯ ಸದಸ್ಯರನ್ನು ಹೊಂದಿರತಕ್ಕದ್ದು. ಅವರಲ್ಲಿ 1/3 ಕ್ಕಿಂತ ಕಡಿಮೆ ಇಲ್ಲದಷ್ಟು ಮಹಿಳೆಯರು ಇರತಕ್ಕದ್ದು ಮತ್ತು ಶೇ. 18 ಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಪರಿಶಿಷ್ಟ ಜಾತಿ/ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು.

**3)** ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿ ಅಧ್ಯಕ್ಷನನ್ನು, ಸ್ಥಳೀಯ ಸಂಸ್ಥೆಯ ಅಧ್ಯಕ್ಷನು ಅಧ್ಯಕ್ಷನಾಗಿರುವ ಸಭೆಯಲ್ಲಿ ಸಮಿತಿಯ ಸದಸ್ಯರುಗಳ ಪೈಕಿಯಿಂದ ಚುನಾಯಿಸತಕ್ಕದ್ದು. ಮತಗಳು ಸರಿಸಮನಾಗಿ ಬಿದ್ದ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷನು ನಿರ್ಣಾಯಕ ಮತವನ್ನು ಚಲಾಯಿಸತಕ್ಕದ್ದು.

**4)** ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷನು ಮೂರು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು.

**5)** ವಿಧಾನ ಸಭೆಯ ಸ್ಥಳೀಯ ಸದಸ್ಯ, ವಿಧಾನ ಪರಿಷತ್ತಿನ ಸದಸ್ಯ ಮತ್ತು ಸಂಸತ್ ಸದಸ್ಯ ಸಮಿತಿ ಸಭೆಗಳಿಗೆ ವಿಶೇಷ ಆಹ್ವಾನಿತರಾಗಿರತಕ್ಕದ್ದು.

**6)** ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಮುಖ್ಯ ಪ್ರಕಾರ್ಯವೆಂದರೆ, ಸ್ಥಳೀಯ ಜನರೊಡನೆ ಸಮಾಲೋಚಿಸಿ ಜನರ ಜೈವಿಕ ವೈವಿಧ್ಯ ರಿಜಿಸ್ಟರನ್ನು ಸಿದ್ಧಪಡಿಸುವುದು. ಈ ರಿಜಿಸ್ಟರ್, ಸ್ಥಳೀಯ ಜೈವಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಜ್ಞಾನ, ಅವುಗಳ ಔಷಧೀಯ ಅಥವಾ

ಯಾವುದೇ ಇತರ ಬಳಕೆ ಅಥವಾ ಅವುಗಳ ಬಗೆಗಿನ ಯಾವುದೇ ಇತರ ಸಾಂಪ್ರದಾಯಿಕ ಜ್ಞಾನ- ಇವುಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

**7)** ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಯ ಇತರ ಪ್ರಕಾರ್ಯವೆಂದರೆ, ಅನುಮೋದನೆ ನೀಡುವುದಕ್ಕಾಗಿ ರಾಜ್ಯ ಜೈವಿಕ ವೈವಿಧ್ಯ ಮಂಡಳಿ ಅಥವಾ ಪ್ರಾಧಿಕಾರವು, ತನಗೆ ಕಳುಹಿಸಿದ ಯಾವುದೇ ವಿಷಯಗಳ ಬಗ್ಗೆ ಸಲಹೆ ನೀಡುವುದು, ಜೈವಿಕ ಸಂಪನ್ಮೂಲಗಳನ್ನು ಬಳಸುವ ಸ್ಥಳೀಯ ವೈದ್ಯರು ಮತ್ತು ವೃತ್ತಿನಿರತರ ಬಗ್ಗೆ ಅಂಕಿ - ಅಂಶ ಮಾಹಿತಿಯನ್ನು ನಿರ್ವಹಿಸುವುದು.

**8)** ಪ್ರಾಧಿಕಾರವು, ಜನರ ಜೈವಿಕ ವೈವಿಧ್ಯ ರಿಜಿಸ್ಟರ್‌ನ ನಮೂನೆ ಮತ್ತು ಅದು ಒಳಗ ೊಂಡಿರತಕ್ಕ ವಿವರಗಳ ಮತ್ತು ವಿದ್ಯುನ್ಮಾನ ದತ್ತಾಂಶ ಆಧಾರದ ನಮೂನೆ ಇವುಗಳನ್ನು ನಿರ್ದಿಷ್ಟಪಡಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

**9)** ಪ್ರಾಧಿಕಾರ ಮತ್ತು ರಾಜ್ಯ ಜೈವಿಕ ವೈವಿಧ್ಯ ಮಂಡಳಿಗಳು ಜನಗ ಜೈವಿಕ ವೈವಿಧ್ಯ ರಿಜಿಸ್ಟರ್‌ಗ ಳನ್ನು ಸಿದ್ಧಪಡಿಸುವುದಕ್ಕಾಗಿ ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮಾರ್ಗದರ್ಶನ ಮತ್ತು ತಾಂತ್ರಿಕ ನೆರವನ್ನು ನೀಡತಕ್ಕದ್ದು.

**10)** ಜನರ ಜೈವಿಕ ವೈವಿಧ್ಯ ರಿಜಿಸ್ಟರುಗಳನ್ನು ಜೈವಿಕ ವೈವಿಧ್ಯ ನಿರ್ವಹಣಾ ಸಮಿತಿಗಳೇ ನಿರ್ವಹಿಸತಕ್ಕದ್ದು ಮತ್ತು ಸಿಂಧುಗೊಳಿಸತಕ್ಕದ್ದು.

**11)** ಸಮಿತಿಯು, ನೀಡಲಾದ ಜೈವಿಕ ಸಂಪನ್ಮೂಲಗಳನ್ನು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ಅವಕಾಶದ ವಿವರಗಳ ಬಗ್ಗೆ, ವಿಧಿಸಲಾದ ಸಂಗ್ರಹಣಾ ಶುಲ್ಕದ ವಿವರಗಳ ಬಗ್ಗೆ ಮತ್ತು ಪ್ರಾಪ್ತವಾದ ಪ್ರಯೋಜನಗಳ ವಿವರಗಳು ಮತ್ತು ಅವುಗಳ ಹಂಚಿಕೆಯ ವಿಧಾನದ ಬಗ್ಗೆ ಮಾಹಿತಿಯನ್ನು ನೀಡುವ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

**23. 50ನೇ ಪ್ರಕರಣದಡಿ ವಿವಾದಗಳನ್ನು ಇತ್ಯರ್ಥಗೊಳಿಸುವುದಕ್ಕೆ ಮೇಲ್ಮನವಿ:**

**1)** ಯಾವುದೇ ಆದೇಶ ಅಥವಾ ನಿರ್ದೇಶನದ ಅನುಷ್ಠಾನದ ಕಾರಣದಿಂದ ಅಥವಾ ಕಾರ್ಯನೀತಿ ನಿರ್ಣಯದ ಯವುದೇ ವಿಷಯದ ಕಾರಣದಿಂದಾಗಿ ಪ್ರಾಧಿಕಾರ ಅಥವಾ ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ(ಗಳ) ನಡುವ ವಿವಾದ ಉಂಟಾದರೆ, ತೊಂದರೆಗೊಳಗಿ ಾದ ಪಕ್ಷಕಾರರಲ್ಲಿ ಒಬ್ಬರು ಎಂದರೆ, ಪ್ರಾಧಿಕಾರ ಅಥವಾ ಸಂದರ್ಭಾರನುಸಾರ, ಮಂಡಳಿಯು, 50ನೇ ಪ್ರಕರಣದಡಿ ನಮೂನೆ -V ರಲ್ಲಿ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯಗಳ ಮಂತ್ರಾಲಯ, ಭಾರತ ಸರ್ಕಾರ (ಕೇಂದ್ರ ಸರ್ಕಾರ) ಇವರಿಗೆ ಮೇಲ್ಮನವಿ ಸಲ್ಲಿಸತಕ್ಕದ್ದು.

**2)** ರಾಜ್ಯ ಜೈವಿಕ ವೈವಿಧ್ಯ ಮಂಡಳಿ ಮತ್ತು ಇತರ ಜೈವಿಕ ವೈವಿಧ್ಯ ಮಂಡಳಿ ಅಥವಾ ಮಂಡಳಿಗಳ ನಡುವೆ ವಿವಾದ ಉಂಟಾದ ಸಂದರ್ಭದಲ್ಲಿ ತೊಂದರೆಗೊಳಗಾದ ಮಂಡಳಿ ಅಥವಾ ಮಂಡಳಿಗಳು ವಿವಾದದ ಅಂಶ ಅಥವಾ ಅಂಶಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಕೇಂದ್ರ ಸರ್ಕಾರವು ಸದರಿ ವಿವಾದದ ವಿಷಯ ಅಥವಾ ವಿಷಯಗಳನ್ನು ಪ್ರಾಧಿಕಾರಕ್ಕೆ ಉಲ್ಲೇಖಿಸತಕ್ಕದ್ದು.

3) ಮೇಲ್ಮನವಿ ಜ್ಞಾಪನ ಪತ್ರದಲ್ಲಿ, ಮೇಲ್ಮನವಿ ಸಲ್ಲಿಸುವುದಕ್ಕಾಗಿ ಮತ್ತು ಅದಕ್ಕೆ ಪರಿಹಾರವನ್ನು ಕೋರುವುದಕ್ಕಾಗಿ, ಪ್ರಕರಣದ ಸಂಗತಿಗಳನ್ನು ಅಪೀಲುದಾರನು ಅವಲಂಬಿಸಿರುವ ಆಧಾರಗಳನ್ನು ತಿಳಿಸತಕ್ಕದ್ದು.

4) ಮೇಲ್ಮನವಿ ಜ್ಞಾಪನ ಪತ್ರದ ಜೊತೆಗೆ, ಮೇಲ್ಮನವಿದಾರನು ಯಾವುದರಿಂದ ತೊಂದರೆಗೆ ಒಳಗಾಗಿದ್ದಾನೋ ಸಂದರ್ಭಾನುಸಾರ, ಆ ಆದೇಶ, ನಿರ್ದೇಶನ ಅಥವಾ ಕಾರ್ಯನೀತಿ ನಿರ್ಣಯದ ಅಧಿಪ್ರಮಾಣಿತ ಪ್ರತಿಯನ್ನು ಲಗತ್ತಿಸತಕ್ಕದ್ದು ಮತ್ತು ಅದಕ್ಕೆ ಅಪೀಲುದಾರನ ಅಧಿಕೃತ ಪ್ರತಿನಿಧಿಯು ಯುಕ್ತವಾಗಿ ಸಹಿ ಮಾಡತಕ್ಕದ್ದು.

5) ಮೇಲ್ಮನವಿ ಜ್ಞಾಪನ ಪತ್ರವನ್ನು ಖುದ್ದಾಗಿಯಾಗಲಿ ಅಥವಾ ಅಂಚೆ ಮೂಲಕ ತಲುಪೊಪ್ಪಿಗೆ ಮುಖಾಂತರವಾಗಿಯಾಗಲಿ, ಪ್ರಶ್ನಿತ ಆದೇಶಗಳು, ನಿರ್ದೇಶನ ಅಥವಾ ಕಾರ್ಯನೀತಿ ನಿರ್ಣಯದ ದಿನಾಂಕದಿಂದ 30 ದಿನಗಳೊಳಗೆ ನಾಲ್ಕು ಪ್ರತಿಗಳಲ್ಲಿ ಸಲ್ಲಿಸತಕ್ಕದ್ದು.

ಆದರೆ, ಕೇಂದ್ರ ಸರ್ಕಾರಕ್ಕೆ, ಮೇಲ್ಮನವಿಯನ್ನು ಸಲ್ಲಿಸುವುದರಲ್ಲಿ ವಿಳಂಬವಾಗಿದ್ದಕ್ಕೆ ಉತ್ತಮ ಮತ್ತು ಸಮರ್ಪಕ ಕಾರಣವಿದೆಯೆಂದು ಮನವರಿಕೆಯಾದರೆ, ಸಂದರ್ಭಾನುಸಾರ, ಪ್ರಶ್ನಿತ ಆದೇಶಗಳು, ನಿರ್ದೇಶನ ಅಥವಾ ಕಾರ್ಯನೀತಿ ನಿರ್ಣಯದ ದಿನಾಂಕದಿಂದ ಮೇಲೆ ಹೇಳಲಾದ 30 ದಿನಗಳ ಮುಕ್ತಾಯದ ನಂತರ ಆದರೆ 45 ದಿನಗಳ ಮುಕ್ತಾಯಕ್ಕೆ ಮೊದಲು ಸಲ್ಲಿಸಲಾಗುವ ಮೇಲ್ಮನವಿಯನ್ನು ಪುರಸ್ಕರಿಸಬಹುದು ಅದಕ್ಕೆ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

6) ಮೇಲ್ಮನವಿಯ ಸುನಾವಣೆಗಾಗಿ ನೋಟೀಸನ್ನು ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮೂಲಕ ನಮೂನೆ VIರಲ್ಲಿ ನೀಡತಕ್ಕದ್ದು.

7) ಕೇಂದ್ರ ಸರ್ಕಾರವು, ಅಪೀಲುದಾರನ ಮತ್ತು ಇತರ ಪಕ್ಷಕಾರರ ಅಹವಾಲನ್ನು ಆಲಿಸಿದ ನಂತರ, ಅಪೀಲನ್ನು ವಿಲೆ ಮಾಡತಕ್ಕದ್ದು.

8) ಅಪೀಲನ್ನು ವಿಲೆ ಮಾಡುವ ಸಂದರ್ಭದಲ್ಲಿ ಅದು, ಸಂದರ್ಭಾನುಸಾರ, ಪ್ರಶ್ನಿತ ಆದೇಶ, ನಿರ್ದೇಶನದ ಅಥವಾ ಕಾರ್ಯನೀತಿಯನ್ನು ಬದಲಾಯಿಸಬಹುದು ಅಥವಾ ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

9) ವಿವಾದವನ್ನು ನ್ಯಾಯ ನಿರ್ಣಯ ಮಾಡುವಾಗ, ಪ್ರಾಧಿಕಾರವು ಸಹಜ ನ್ಯಾಯ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಕಾರ್ಯಸಾಧ್ಯವಾದಷ್ಟುಮಟ್ಟಿಗೆ, ಕೇಂದ್ರ ಸರ್ಕಾರವು ಈ ನಿಯಮದಡಿ ಅನುಸರಿಸಲು ಅಗತ್ಯಪಡಿಸಿರುವಂಥ ಕಾರ್ಯವಿಧಾನವನ್ನೇ ಅನುಸರಿಸತಕ್ಕದ್ದು.

**24. 61ನೇ ಪ್ರಕರಣದಡಿ ನೋಟೀಸನ್ನು ನೀಡುವ ರೀತಿ:**

1) 61ನೇ ಪ್ರಕರಣದ (ಬಿ) ಖಂಡದಡಿ ನೋಟೀಸನ್ನು ನೀಡುವ ರೀತಿ ಈ ಮುಂದಿನಂತಿರತಕ್ಕದ್ದು ಎಂದರೆ:

i) ನೋಟೀಸು ನಮೂನೆ VIIರಂತೆ ಲಿಖಿತದಲ್ಲಿರತಕ್ಕದ್ದು.

ii) ನೋಟೀಸನ್ನು ನೀಡುವ ವ್ಯಕ್ತಿಯು,

(ಎ) ಆರೋಪಿಸಲಾದ ಅಪರಾಧವು ಕೇಂದ್ರಾಡಳಿತ ಪ್ರದೇಶದಲ್ಲಿ ಸಂಭವಿಸಿದ್ದರೆ, ರಾಷ್ಟ್ರೀಯ ಜೈವಿಕ ವೈವಿಧ್ಯ ಪ್ರಾಧಿಕಾರದ ಅಧ್ಯಕ್ಷರಿಗೆ; ಮತ್ತು

(ಬಿ) ಆರೋಪಿಸಲಾದ ಅಪರಾಧವು ರಾಜ್ಯದಲ್ಲಿ ಸಂಭವಿಸಿದ್ದರೆ, ರಾಜ್ಯ ಜೈವಿಕ ವೈವಿಧ್ಯ ಮಂಡಳಿಯ ಅಧ್ಯಕ್ಷರಿಗೆ, -ಕಳುಹಿಸತಕ್ಕದ್ದು.

**2)** (1)ನೆ ಉಪ ನಿಯಮದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ನೋಂದಾಯಿತ ಅಂಚೆ ಮೂಲಕ ಯುಕ್ತ ತಲುಪೊಪ್ಪಿಗೆಯೊಂದಿಗೆ ಕಳುಹಿಸತಕ್ಕದ್ದು; ಮತ್ತು

**3)** 61ನೇ ಪ್ರಕರಣದ (ಬಿ) ಖಂಡದಲ್ಲಿ ನಮೂದಿಸಲಾದ ಮೂವತ್ತು ದಿನಗಳ ಅವಧಿಯನ್ನು (1)ನೇ ಉಪ ನಿಯಮದಲ್ಲಿ ನಮೂದಿಸಲಾದ ಪ್ರಾಧಿಕಾರಗಳು ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಪರಿಗಣಿಸತಕ್ಕದ್ದು.

0

**ನಮೂನೆ - I**

**(ನಿಯಮ 14ನ್ನು ನೋಡಿ)**

**ಜೈವಿಕ ಸಂಪನ್ಮೂಲಗಳನ್ನು ಮತ್ತು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಹೊಂದುವ ಅವಕಾಶ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ**

**ಭಾಗ - ಎ**

i) ಅರ್ಜಿದಾರನ ಪೂರ್ಣ ವಿವರಗಳು

ii) ಹೆಸರು

iii) ಖಾಯಂ ವಿಳಾಸ

iv) ಭಾರತದಲ್ಲಿ ಸಂಪರ್ಕಿಸಬಹುದಾದ ವ್ಯಕ್ತಿ/ಏಜೆಂಟ್ ಯಾರಾದರೂ ಇದ್ದರೆ ಅವರ ವಿಳಾಸ

v) ಸಂಸ್ಥೆಯ ರೂಪುರೇಷೆ (ಅರ್ಜಿದಾರನು ವ್ಯಕ್ತಿಯಾಗಿದ್ದಲ್ಲಿ ವೈಯಕ್ತಿಕ ಪರಿಚಯ) ದಯವಿಟ್ಟು ಅಧಿಪ್ರಮಾಣಿತ ಸೂಕ್ತ ದಾಖಲೆಗಳನ್ನು ಲಗತ್ತಿಸಿ.

vi) ವ್ಯವಹಾರದ ಸ್ವರೂಪ

vii) ಅಮೇರಿಕ ಸಂ.ಸ.ದ ಡಾಲರ್‌ನಲ್ಲಿ ವಹಿವಾಟು

**2. ಕೋರಿರುವ ಹೊಂದುವ ಅವಕಾಶದ ಮತ್ತು ಹೊಂದುವ ಅವಕಾಶ ಪಡೆಯುವಂಥ ಜೈವಿಕ ವಸ್ತುವಿನ ಮತ್ತು ಅದರ ಬಗೆಗಿನ ಜ್ಞಾನದ ಬಗ್ಗೆ ವಿವರಗಳು ಮತ್ತು ನಿರ್ದಿಷ್ಟ ಮಾಹಿತಿ**

**ಎ)** ಜೈವಿಕ ಸಂಪನ್ಮೂಲಗಳ ಗುರುತು (ವೈಜ್ಞಾನಿಕ ಹೆಸರು), ಮತ್ತು ಅದರ ಸಾಂಪ್ರದಾಯಿಕ ಬಳಕೆ;

**ಬಿ)** ಉದ್ದೇಶಿತ ಸಂಗ್ರಹಣೆಯ ಭೌಗೋಳಿಕ ಸ್ಥಳ;

**ಸಿ)** ಸಾಂಪ್ರದಾಯಿಕ ಜ್ಞಾನದ (ಮೌಖಿಕ/ದಸ್ತಾವೇಜಿಯ)ವಿವರಣೆ/ಸ್ವರೂಪ;

**ಡಿ)** ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವ ಯಾರೇ ಗುರುತಿಸಲಾದ ವ್ಯಕ್ತಿ/ಸಮುದಾಯ;

**ಇ)** ಸಂಗ್ರಹಿಸಬೇಕಾದ ಜೈವಿಕ ಸಂಪನ್ಮೂಲಗಳ ಪ್ರಮಾಣ (ಅನುಸೂಚಿಯನ್ನು ನೀಡಿ);

**ಎಫ್)** ಯಾವ ಸಮಯದಲ್ಲಿ ಜೈವಿಕ ಸಂಪನ್ಮೂಲವನ್ನು ಸಂಗ್ರಹಿಸುವುದಕ್ಕೆ ಪ್ರಸ್ತಾವಿಸಲಾಗಿದೆಯೋ ಅಂಥ ಸಮಯಾವಧಿ;

**ಜಿ)** ಆಯ್ಕೆಯನ್ನು ಮಾಡುವುದಕ್ಕೆ ಕಂಪನಿಯು ಅಧಿಕಾರ ನೀಡಿರುವ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ;

**ಹೆಚ್)** ಸಂಶೋಧನೆಯ ಬಗೆ ಮತ್ತು ವ್ಯಾಪ್ತಿ, ಅದರಿಂದ ಪಡೆಯಲಾಗು ತ್ತಿರುವ ಮತ್ತು ಪಡೆಯುವ ನಿರೀಕ್ಷೆಯಿರುವ ವಾಣಿಜ್ಯ ಬಳಕೆ ಸೇರಿದಂತೆ ಯಾವ ಉದ್ದೇಶಕ್ಕಾಗಿ ಹೊಂದುವ ಅವಕಾಶವನ್ನು ಕೋರಲಾಗಿದೆಯೋ ಆ ಉದ್ದೇಶ;

**ಐ)** ಯಾವುದೇ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೈವಿಕ ವೈವಿಧ್ಯದ ಯಾವುದೇ ಘಟಕಾಂಶಕ್ಕೆ ಅಪಾಯವುಂಟಾಗುತ್ತದೆಯೇ ಮತ್ತು ಸಂಪನ್ಮೂಲಗಳನ್ನು ಹೊಂದುವ ಅವಕಾಶದಿಂದ ಯಾವುದೇ ತೊಂದರೆ ಉದ್ಭವಿಸುವುದೇ

3. ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂಥ ಯಾವುದೇ ರಾಷ್ಟ್ರೀಯ ಸಂಸ್ಥೆಯ ವಿವರಗಳು.

4. ಹೊಂದುವ ಅವಕಾಶ ಪಡೆದ ಸಂಪನ್ಮೂಲಗಳ ಪ್ರಾಥಮಿಕ ಗಮ್ಯ ಸ್ಥಾನ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ನಿರ್ವಹಿಸುವಂಥ ಸ್ಥಳದ ಗುರುತು.

5. ಅರ್ಜಿದಾರನಿಗೆ ಅಥವಾ ಆತ/ಆಕೆ ಸೇರಿದ ದೇಶಕ್ಕೆ ಬೌದ್ಧಿಕ ಆಸ್ತಿ ಹಕ್ಕಿನಿಂದ, ಉದ್ದೇಶಿತ ಅಥವಾ ಪ್ರಾಪ್ತವಾಗಬಹುದಾದ, ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ಪಡೆದ ಪೇಟೆಂಟ್‌ನಿಂದ ದೊರೆಯುವ ಲಾಭಗಳು ಸೇರಿದಂತೆ, ಆರ್ಥಿಕ ಮತ್ತು ಇತರೆ ಲಾಭಗಳು.
6. ಅರ್ಜಿದಾರನಿಗೆ ಅಥವಾ ಆತ/ಆಕೆ ಸೇರಿರುವಂಥ ದೇಶಕ್ಕೆ ಉದ್ದೇಶಿತ ಅಥವಾ ಪ್ರಾಪ್ತವಾಗಬಹುದಾದ ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಜ್ಞಾನದಿಂದ ದೊರೆತ ಜೈವಿಕ ತಂತ್ರಜ್ಞಾನ, ವೈಜ್ಞಾನಿಕ, ಸಾಮಾಜಿಕ ಅಥವಾ ಯಾವುದೇ ಇತರ ಪ್ರಯೋಜನಗಳು.
7. ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳು ಮತ್ತು ಸಾಂಪ್ರದಾಯಿಕ ಜ್ಞಾನದ ಬಳಕೆಯಿಂದ ಭಾರತ / ಸಮುದಾಯಗಳಿಗೆ ದೊರೆಯುವ ಸೌಲಭ್ಯಗಳ ಅಂದಾಜು.
8. ಲಾಭವನ್ನು ಹಂಚಿಕೊಳ್ಳುವ ಪ್ರಸ್ತಾವಿತ ವ್ಯವಸ್ಥೆ ಮತ್ತು ಏರ್ಪಾಡುಗಳು.
9. ಸೂಕ್ತವೆಂದು ಪರಿಗಣಿಸಿದ ಯಾವುದೇ ಇತರ ಮಾಹಿತಿ.

## ಭಾಗ -ಬಿ

## ಘೋಷಣೆ

ನಾನು / ನಾವು

- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸಂಪನ್ಮೂಲಗಳ ಸುಸ್ಥಿರತೆಗೆ ಪ್ರತೀಕೂಲ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಯಾವುದೇ ಪರಿಸರ ಪರಿಣಾಮ ಉಂಟಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಜೀವಿ ವ್ಯವಸ್ಥೆಗೆ ಯಾವುದೇ ತೊಂದರೆ ಎದುರಾಗುವುದಿಲ್ಲ;
- ಪ್ರಸ್ತಾವಿತ ಜೈವಿಕ ಸಂಪನ್ಮೂಲಗಳ ಸಂಗ್ರಹಣೆಯಿಂದ ಸ್ಥಳೀಯ ಸಮುದಾಯಗಳ ಮೇಲೆ ಪ್ರತೀಕೂಲವಾಗಿ ಪರಿಣಾಮ ಉಂಟಾಗುವುದಿಲ್ಲ;

ಎಂದು ಈ ಮೂಲಕ ಘೋಷಿಸುತ್ತೇನೆ/ವೆ.

ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು / ನಾವು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು ಮತ್ತು ದೋಷ ಪೂರ್ಣ ಮಾಹಿತಿಗೆ ನಾನು/ವು ಜವಾಬ್ದಾರಿಯಾಗಿರುತ್ತೇನೆ/ವೆ.

**ಸಹಿ**

**ಸ್ಥಳ:** **ಹೆಸರು**

**ದಿನಾಂಕ:** **ಪದನಾಮ**

# ನಮೂನೆ - II

**(ನಿಯಮ 17ನ್ನು ನೋಡಿ)**

**ವಾಣಿಜ್ಯ ಉದ್ದೇಶಗಳಿಗಾಗಿ ವಿದೇಶೀ ವ್ಯಕ್ತಿಗಳಿಗೆ, ಕಂಪನಿಗಳಿಗೆ, ಅನಿವಾಸ ಭಾರತೀಯರಿಗೆ, ಸಂಶೋಧನೆಯ ಫಲಿತಾಂಶಗಳನ್ನು ವರ್ಗಾಯಿಸುವುದಕ್ಕಾಗಿ ರಾಷ್ಟ್ರೀಯ ಜೈವಿಕ ವೈವಿಧ್ಯ ಪ್ರಾಧಿಕಾರದ ಪೂರ್ವಾನುಮೋದನೆ ಕೋರುವುದಕ್ಕೆ ಸಂಬಂಧಿಸಿದಂಥ ಅರ್ಜಿ.**

1. ಅರ್ಜಿದಾರನ ಪೂರ್ಣ ವಿವರಗಳು:
   - i) ಹೆಸರು
   - ii) ವಿಳಾಸ
   - iii) ವೃತ್ತಿಯ ರೂಪುರೇಷೆ
   - iv) ಸಂಸ್ಥೆಯ ಸಂಯೋಜನೆ (ದಯವಿಟ್ಟು ಅಧಿಪ್ರಮಾಣಿತ ಸೂಕ್ತ ದಸ್ತಾವೇಜುಗಳನ್ನು ಲಗತ್ತಿಸಿ)

2. ನಡೆಸಲಾದ ಸಂಶೋಧನೆಯ ಫಲಿತಾಂಶಗಳ ವಿವರಗಳು.
3. ಸಂಶೋಧನೆಯಲ್ಲಿ ಬಳಸಲಾದ ಜೈವಿಕ ಸಂಪನ್ಮೂಲಗಳ ಮತ್ತು/ಅಥವಾ ಅವುಗಳ ಬಗೆಗಿನ ಜ್ಞಾನದ ವಿವರಗಳು.
4. ಸಂಶೋಧನೆಯಲ್ಲಿ ಬಳಸಲಾದ ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಲಾದಂಥ ಭೌಗೋಳಿಕ ಸ್ಥಳ;
5. ಸಂಶೋಧನೆಯಲ್ಲಿ ಬಳಸಲಾದ ಯಾವುದೇ ಸಾಂಪ್ರದಾಯಿಕ ಜ್ಞಾನದ ವಿವರಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನೊಂದಿರುವ ಯಾರೇ ಗುರುತಿಸಲ್ಪಟ್ಟ ವ್ಯಕ್ತಿ/ಸಮುದಾಯ.
6. ಸಂಶೋಧನೆಯಲ್ಲಿ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿರುವ ಸಂಸ್ಥೆಯ ವಿವರಗಳು.
7. ಸಂಶೋಧನೆಯ ಫಲಿತಾಂಶಗಳನ್ನು ಯಾರಿಗೆ ವರ್ಗಾವಣೆ ಮಾಡುವುದಕ್ಕೆ ಉದ್ದೇಶಿಸಲಾಗಿದೆಯೋ ಅಂತ ವ್ಯಕ್ತಿ/ಸಂಸ್ಥೆಯ ವಿವರಗಳು.
8. ವರ್ಗಾಯಿಸಿದ ಸಂಶೋಧನಾ ಫಲಿತಾಂಶಗಳ ವಾಣಿಜ್ಯೀಕರಣದಿಂದಾಗಿ ವ್ಯಕ್ತಿ/ಸಂಸ್ಥೆಗೆ ಪ್ರಾಪ್ತವಾಗುತ್ತದೆಂದು ಉದ್ದೇಶಿಸಲಾದ ಅಥವಾ ಪ್ರಾಪ್ತವಾಗಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನೆಗಳ ವಿವರಗಳು.
9. ಸಂಶೋಧನೆಯ ಫಲಿತಾಂಶಗಳ ವರ್ಗಾವಣೆಗೆ ಅನುಮೋದನೆಯನ್ನು ಕೋರುವ ಅರ್ಜಿದಾರನಿಗೆ ಪ್ರಾಪ್ತವಾಗುತ್ತದೆಂದು ಉದ್ದೇಶಿಸಲಾದ ಅಥವಾ ಪ್ರಾಪ್ತವಾಗಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.
10. ಸಂಶೋಧನೆಯ ಫಲಿತಾಂಶಗಳ ವರ್ಗಾವಣೆಗೆ ಅನುಮೋದನೆ ಕೋರುವ ಉದ್ದೇಶಿತ ಸ್ವೀಕರ್ತ ಮತ್ತು ಅರ್ಜಿದಾರನ ನಡುವೆ ಆಗಿರುವ ಯಾವುದೇ ಒಪ್ಪಂದ ಅಥವಾ ಒಡಂಬಡಿಕೆ ವಿವರಗಳು.

## ಘೋಷಣೆ

ಅರ್ಜಿ ನಮೂನೆಯಲ್ಲಿ ನೀಡಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ನಾನು / ನಾವು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ದೋಷಪೂರ್ಣ ಮಾಹಿತಿಗೆ ನಾನು/ವು ಜವಾಬ್ದಾರಿಯಾಗಿರುತ್ತೇನೆ/ವೆ.

**ಸಹಿ**

**ಸ್ಥಳ:** **ಹೆಸರು**

**ದಿನಾಂಕ:** **ಪದನಾಮ**

## ನಮೂನೆ - III

**(18ನೇ ನಿಯಮ ನ್ನು ನೋಡಿ)**

**ಬೌದ್ಧಿಕ ಆಸ್ತಿಯ ಹಕ್ಕಿಗೆ ಅರ್ಜಿ ಸಲ್ಲಿಸಲು ರಾಷ್ಟ್ರೀಯ ಜೌವಿಕ ವೈವಿಧ್ಯ ಪ್ರಾಧಿಕಾರದ ಪೂರ್ವ ಅನುಮೋದನೆ ಕೋರುವುದಕ್ಕಾಗಿ ಅರ್ಜಿ.**

1. ಅರ್ಜಿದಾರನ ಸಂಪೂರ್ಣ ವಿವರಗಳು:
   i) ಹೆಸರು
   ii) ವಿಳಾಸ
   iii) ವೃತ್ತಿಯ ರೂಪುರೇಷೆ
   iv) ಸಂಸ್ಥೆಯ ಸಂಯೋಜನೆ (ದಯವಿಟ್ಟು ಅಧಿಪ್ರಮಾಣಿತ ಸುಸಂಗತ ದಸ್ತಾವೇಜುಗಳನ್ನು ಲಗತ್ತಿಸಿ)

2. ಬೌದ್ಧಿಕ ಆಸ್ತಿ ಹಕ್ಕನ್ನು ಯಾವುದರ ಮೇಲೆ ಕೋರಲಾಗಿದೆಯೋ ಆ ಸಂಶೋಧನೆಯ ವಿವರಗಳು.
3. ಸಂಶೋಧನೆಯಲ್ಲಿ ಬಳಸಿದ ಜೈವಿಕ ಸಂಪನ್ಮೂಲಗಳು ಮತ್ತು/ಅಥವಾ ಅವುಗಳ ಬಗೆಗಿನ ಜ್ಞಾನದ ವಿವರಗಳು.
4. ಸಂಶೋಧನೆಯಲ್ಲಿ ಬಳಸಿದ ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಲಾದಂಥ ಭೌಗೋಳಿಕ ಸ್ಥಳ;
5. ಸಂಶೋಧನೆಯಲ್ಲಿ ಬಳಸಲಾದ ಯಾವುದೇ ಸಾಂಪ್ರದಾಯಿಕ ಜ್ಞಾನದ ಮತ್ತು ಅಂಥ ಸಾಂಪ್ರದಾಯಿಕ ಜ್ಞಾನವನ್ನು ಹೊಂದಿರುವರೆಂದು ಗುರುತಿಸಲಾದ ಯಾರೇ ವ್ಯಕ್ತಿಯ/ಸಮುದಾಯದ ವಿವರಗಳು.
6. ಸಂಶೋಧನೆಯಲ್ಲಿ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ನಡೆಸಿದ ಸಂಸ್ಥೆಯ ವಿವರಗಳು.
7. ಸಂಶೋಧನೆಯ ವಾಣಿಜ್ಯೀಕರಣದಿಂದ ಅರ್ಜಿದಾರನಿಗೆ ಪ್ರಾಪ್ತವಾಗುವುದಾಗಿ ಉದ್ದೇಶಿಸಲಾದ ಅಥವಾ ಪ್ರಾಪ್ತವಾಗಬಹುದಾದ ಆರ್ಥಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.

**ಘೋಷಣೆ**

ನಾನು / ನಾವು ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ದೋಷಪೂರ್ಣ ಮಾಹಿತಿಗೆ ನಾನು/ವು ಜವಾಬ್ದಾರರಾಗಿರುತ್ತೇನೆ/ವೆ.

**ಸಹಿ**

**ಸ್ಥಳ:** **ಹೆಸರು**

**ದಿನಾಂಕ:** **ಪದನಾಮ**

## ನಮೂನೆ - IV

**(19ನೇ ನಿಯಮವನ್ನು ನೋಡಿ)**

**ಹೊಂದು ಅವಕಾಶ ಪಡೆದ ಜೈವಿಕ ಸಂಪನ್ಮೂಲಗಳನ್ನು ಅವುಗಳ ಬಗೆಗಿನ ಸಾಂಪ್ರದಾಯಿಕ ಜ್ಞಾನವನ್ನು ಮೂರನೇ ಪಕ್ಷಕಾರನಿಗೆ ವರ್ಗಾಯಿಸಲು ರಾಷ್ಟ್ರೀಯ ಜೈವಿಕ ರಾಷ್ಟ್ರೀಯ ಜೈವಿಕ ವೈವೀಧ್ಯ ಪ್ರಾಧಿಕಾರದ ಅನುಮೋದನೆಯನ್ನು ಕೋರಲು ಸಲ್ಲಿಸಬೇಕಾದ ಅರ್ಜಿ ನಮೂನೆ.**

1. ಅರ್ಜಿದಾರನ ಸಂಪೂರ್ಣ ವಿವರಗಳು:
   i) ಹೆಸರು
   ii) ವಿಳಾಸ
   iii) ವೃತ್ತಿಯ ರೂಪುರೇಷೆ
   iv) ಸಂಸ್ಥೆಯ ಸಂಯೋಜನೆ (ದಯವಿಟ್ಟು ಅಧಿಪ್ರಮಾಣಿತ ಸುಸಂಗತ ದಸ್ತಾವೇಜುಗಳನ್ನು ಲಗತ್ತಿಸಿ)

2. ಹೊಂದುವ ಅವಕಾಶ ಪಡೆದ ಜೈವಿಕ ವಸ್ತುಗಳ ಮತ್ತು ಸಾಂಪ್ರದಾಉಇಕ ಜ್ಞಾನದ ವಿವರಗಳು.
3. ಜೈವಿಕ ಸಂಪನ್ಮೂಲಗಳನ್ನು ಹೊಂದುವ ಅವಕಾಶದ ಬಗ್ಗೆ ಮಾಡಿಕೊಂಡ ಪ್ರವೇಶಾವಕಾಶ ಕರಾರಿನ ವಿವರಗಳು (ಪ್ರತಿಯನ್ನು ಲಗತ್ತಿಸಿ).
4. ಲಾಭಗಳ ಮತ್ತು ಈಗಾಗಲೇ ಅನುಷ್ಠಾನಗೊಳಿಸಿರುವ ಲಾಭದ ಹಂಚಿಕೆಯ ವ್ಯವಸ್ಥೆ/ಏರ್ಪಾಟುಗಳ ವಿವರಗಳು.
5. ಹೊಂದುವ ಅವಕಾಶವನ್ನು ಪಡೆದ ವಸ್ತುವನ್ನು/ಜ್ಞಾನವನ್ನು ವರ್ಗಾವಣೆ ಮಾಡುವುದಕ್ಕೆ ಉದ್ದೇಶಿಸಲಾಗಿರುವ ಮೂರನೆ ಪಕ್ಷಕಾರನ ವಿವರಗಳು.
6. ಉದ್ದೇಶಿತ ಮೂರನೇ ಪಕ್ಷಕಾರನಿಗೆ ವರ್ಗಾವಣೆ ಮಾಡುವ ಉದ್ದೇಶ
7. ಹೊಂದುವ ಅವಕಾಶ ಪಡೆದ ಜೈವಿಕ ವಸ್ತುಗಳು ಅಥವಾ ಜ್ಞಾನದ ವರ್ಗಾವಣೆಯಿಂದ ಮೂರನೆ ಪಕ್ಷಕಾರನಿಗೆ ದೊರೆಯುವುದಾಗಿ ಉದ್ದೇಶಿಸಲಾದ ಅಥವಾ ದೊರೆಯಬಹುದಾದ ಆರ್ಥಿಕ, ಸಾಮಾಜಿಕ, ಜೈವಿಕ ತಂತ್ರಜ್ಞಾನ, ವೈಜ್ಞಾನಿಕ ಅಥವಾ ಯಾವುದೇ ಇತರ ಪ್ರಯೋಜನಗಳ ವಿವರಗಳು.
8. ಅರ್ಜಿದಾರನ ಮತ್ತು ಮೂರನೆಯ ಪಕ್ಷಕಾರನ ನಡುವೆ ಆಗಿರುವ ಯಾವುದೇ ಒಪ್ಪಂದದ ವಿವರಗಳು.
9. ಹೊಂದುವ ಅವಕಾಶ ಪಡೆದ ಜೈವಿಕ ಸಂಪನ್ಮೂಲ ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಮೂರನೆಯ ಪಕ್ಷಕಾರನಿಗೆ ವರ್ಗಾವಣೆ ಮಾಡುವುದರಿಂದ ಭಾರತಕ್ಕೆ/ಸಮುದಾಯಕ್ಕೆ ದೊರೆಯುವ ಲಾಭಗಳ ಅಂದಾಜು.
10. ಪ್ರಸ್ತಾವಿತ ಮೂರನೇ ಪಕ್ಷಕಾರನಿಗೆ ವರ್ಗಾವಣೆ ಮಾಡುವುದರಿಂದ ದೊರೆಯುವ ಲಾಭದ ಹಂಚಿಕೆಗೆ ಪ್ರಸ್ತಾವಿಸಿರುವ ವ್ಯವಸ್ಥೆ ಮತ್ತು ಏರ್ಪಾಟುಗಳು.
11. ಯಾವುದೇ ಇತರ ಸುಸಂಬದ್ಧ ಮಾಹಿತಿ.

### ಘೋಷಣೆ

ನಾನು / ನಾವು ಅರ್ಜಿ ನಮೂನೆಯಲ್ಲಿ ಒದಗಿಸಲಾಗಿರುವ ಮಾಹಿತಿಯು ಸತ್ಯವಾಗಿದೆ ಮತ್ತು ಸರಿಯಾಗಿದೆ ಎಂದು ಘೋಷಿಸುತ್ತೇನೆ/ವೆ ಮತ್ತು ಯಾವುದೇ ತಪ್ಪು/ದೋಷಪೂರ್ಣ ಮಾಹಿತಿಗೆ ನಾನು/ವು ಜವಾಬ್ದಾರಿಯಾಗಿರುತ್ತೇನೆ/ವೆ.

**ಸಹಿ**

**ಸ್ಥಳ:** **ಹೆಸರು**

**ದಿನಾಂಕ:** **ಪದನಾಮ**

# ನಮೂನೆ -V

**(23(1) ನಿಯಮವನ್ನು ನೋಡಿ)**

**ಮೇಲ್ಮನವಿಯ ಜ್ಞಾಪನದ ಪತ್ರ**

**ಪರಿಸರ ಮತ್ತು ಅರಣ್ಯ ಮಂತ್ರಾಲಯದ--------------- ನವದೆಹಲಿ, ಇವರ ಮುಂದೆ**

**ಅಥವಾ**

**(ಸಂದರ್ಭಾನುಸಾರ) ರಾಷ್ಟ್ರೀಯ ಜೈವಿಕ ವೈವಿಧ್ಯಪ್ರಾಧಿಕಾರದ ಮುಂದೆ**

ಮೇಲ್ಮನವಿ ಸಂಖ್ಯೆ:200..ರ............

____________________________________________________________ಅರ್ಜಿದಾರ (ರು)

ವಿರುದ್ಧ

____________________________________________________________ಪ್ರತಿವಾದಿ(ಗಳು)

(ಪ್ರಾಧಿಕಾರ/ಸಂದರ್ಭಾನುಸಾರ ಮಂಡಳಿಯ ಪದನಾಮವನ್ನು ಇಲ್ಲಿ ನಮೂದಿಸಿ)

ಈ ಮುಂದಿನ ವಾಸ್ತವಾಂಶಗಳ ಮತ್ತು ಕಾರಣಗಳ ಮೇಲೆ ಪ್ರತಿವಾದಿಯು ಹೊರಡಿಸಿರುವ ............. ದಿನಾಂಕದ ಆದೇಶದ ವಿರುದ್ಧ ಈ ಮೇಲ್ಮನವಿ ಜ್ಞಾಪನವನ್ನು ಅರ್ಜಿದಾರ ಸಲ್ಲಿಸುತ್ತಿದ್ದಾನೆ.

1. **ವಾಸ್ತವಾಂಶಗಳು:**

   (ಇಲ್ಲಿ ಪ್ರಕರಣದ ವಾಸ್ತವಾಂಶಗಳನ್ನು ವಿವರಿಸಿ)

2. **ಕಾರಣಗಳು:**

   (ಇಲ್ಲಿ ಯಾವ ಕಾರಣಗಳ ಮೇಲೆ ಮೇಲ್ಮನವಿಯನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ನಮೂದಿಸಿ)

   i)

   ii)

   iii)

## ನಮೂನೆ -VI

**(23 ನಿಯಮವನ್ನು ನೋಡಿ)**

**ಪರಿಸರ ಮತ್ತು ಅರಣ್ಯ ಮಂತ್ರಾಲಯ,--------------- ನವದೆಹಲಿ, ಇವರ ಮುಂದೆ**

**ಅಥವಾ**

**(ಸಂದರ್ಭಾನುಸಾರ) ರಾಷ್ಟ್ರೀಯ ಜೈವಿಕವೈವಿಧ್ಯಪ್ರಾಧಿಕಾರದ ಮುಂದೆ**

ಮೇಲ್ಮನವಿ ಸಂಖ್ಯೆ:200..ರ...........

ಮೇಲ್ಮನವಿದಾರ(ರು)

________________________________________________________________________

ವಿರುದ್ಧ

ಪ್ರತಿವಾದಿ(ಗಳು)

________________________________________________________________________

ಇವರ ನಡುವೆ

## ನೋಟೀಸು

ಆದೇಶ / ನಿರ್ದೇಶನ / ನೀತಿ ನಿರ್ಣಯದ (ವಿವರಗಳನ್ನು ನೀಡಿ) ವಿರುದ್ಧ ಮೇಲ್ಮನವಿದಾರನು ದಾಖಲು ಮಾಡಿರುವ ಮೇಲ್ಕಂಡ ಮೇಲ್ಮನವಿಯ ಚುನಾವಣೆಯನ್ನು ಇಇಇಇ ರಂದು........... ಕ್ಕೆ (ಸಮಯ) ನಿಗದಿಪಡಿಸಲಾಗಿದೆ ಎಂಬುದನ್ನು ದಯವಿಟ್ಟು ಗಮನಿಸುವುದು.

ಮೇಲ್ಮನವಿ ಜೊತೆ ದಾಖಲು ಮಾಡಿದ ಮೇಲ್ಮನವಿ ಜ್ಞಾಪನದ ಮತ್ತು ಇತರ ಅನುಬಂಧಗಳ ಪ್ರತಿಗಳನ್ನು ನಿಮ್ಮ ಪರಾಮರ್ಶೆಗಾಗಿ ಇದರೊಂದಿಗೆ ಕಳುಹಿಸಿಕೊಡಲಾಗಿದೆ.

ಮೇಲ್ಮನವಿ ಸುನಾವಣೆಯ ಸದರಿ ದಿನಾಂಕದಂದು ಅಥವಾ ಇತರ ತರುವಾಯದ ದಿನಾಂಕದಂದು ನೀವು ಹಾಜರಾಗಲು ತಪ್ಪಿದರೆ, ನಿಮ್ಮನ್ನು ಏಕಪಕ್ಷೀಯವಾಗಿರಿಸುವ ಮೂಲಕ ಮೇಲ್ಮನವಿಯನ್ನು ಅಂತಿಮವಾಗಿ ವಿಲೆಮಾಡಲಾಗುತ್ತದೆಂಬುದನ್ನು ದಯವಿಟ್ಟು ಗಮನಿಸಿ.

| | |
|---|---|
| **ದಿನಾಂಕ:** | **ಅಪೀಲು ಪ್ರಾಧಿಕಾರದ ಪರವಾಗಿ** |
| **ಸ್ಥಳ:** | **ಅಧಿಕೃತ ರುಜುಮಾಡುವವರು (ಮೊಹರು)** |

# ನಮೂನೆ -VII

**ನೋಟೀಸಿನ ನಮೂನೆ**

**(24(1)ನೇ ನಿಯಮವನ್ನು ನೋಡಿ)**

**ತಲುಪೊಪ್ಪಿಗೆ ಸಹಿತ ನೋಂದಾಯಿತ ಅಂಚೆ ಮೂಲಕ**

ಇವರಿಂದ,

ಶ್ರೀ......................................................................................................................

.........................................................................................................................

.

ಇವರಿಗೆ,

.........................................................................................................................

ವಿಷಯ: ಜೈವಿಕ ವೈವಿಧ್ಯ ಅಧಿನಿಯಮ, 2002ರ ಪ್ರಕರಣ 61(ಬಿ)ನ ಅಡಿಯಲ್ಲಿ ನೋಟೀಸು.

......................................................................................

ಇವರು ಜೈವಿಕ ವೈವಿಧ್ಯ ಅಧಿನಿಯಮ, 2002ರ ಅಡಿಯಲ್ಲಿನ ಅಪರಾಧವನ್ನು ಮಾಡಿರುವುದರಿಂದ/ ಮಾಡುತ್ತಿರುವುದರಿಂದ

2. ನಾನು/ನಾವು ಜೈವಿಕ ವೈವಿಧ್ಯ ಅಧಿನಿಯಮ, 2002ರ ಉಪಬಂಧಗಳ ಉಲ್ಲಂಘನೆಗಾಗಿ................. ವಿರುದ್ಧ ನ್ಯಾಯಾಲಯದಲ್ಲಿ ಒಂದು ದೂರನ್ನು ಸಲ್ಲಿಸುವ ನನ್ನ/ನಮ್ಮ ಉದ್ದೇಶದ ಬಗ್ಗೆ ಜೈವಿಕ ವೈವಿಧ್ಯ ಅಧಿನಿಯಮ, 2002ರ 61(ಬಿ) ಪ್ರಕರಣದ ಅಡಿಯಲ್ಲಿ ಮೂವತ್ತು ದಿನಗಳ ನೋಟಿಸನ್ನು ಈ ಮೂಲಕ ನೀಡುತ್ತಿದ್ದೇನೆ/ವೆ.

3. ನನ್ನ/ನಮ್ಮ ನೋಟೀಸಿನ ಸಮರ್ಥನೆಗಾಗಿ, ನಾನು/ನಾವು ಇದರೊಂದಿಗೆ ರುಜುವಾತಿನ ಸಾಕ್ಷಿಯಾಗಿ ಈ ಕೆಳಕಂಡ ದಸ್ತಾವೇಜುಗಳನ್ನು ಲಗತ್ತಿಸಿದ್ದೇನೆ/ವೆ.

ಸ್ಥಳ:

ದಿನಾಂಕ: ಸಹಿ